ಹಿತ್ತಲ ಗಿಡ

ಚಾತುರ್ಮಾಸಿಕ

ಪೈರು 9, ಕೊಯಿಲು 3, ಸೆಪ್ಟೆಂಬರ್- ಡಿಸೆಂಬರ್, 2003

ರೈತ, ವಿಜ್ಞಾನಿ, ವಿದ್ಯಾರ್ಥಿ
ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

'ತಳಿ ರಕ್ಷಣಾ ಸಂಪ್ರದಾಯ'ದ ಬಂಗಾಡಿ ಕಿಲ್ಲೂರು ದೇವರಾಯರು



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟುಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹನಿ ಬೀ ಬಳಗ

ಹಿತ್ತಲ ಗಿಡ

Honey Bee (*English*)
Prof. Anil K.Gupta, Indian Institute of Management,
Vastrapur, Ahmedabad - 380 015, Ph: 079-6307241
email: anilg@nifindia.org, honeybee@sristi.org

Abeja (*Spanish*)
Mario Mejia Gutierrez, Carrera 43 No.10-50 Apto.502
Telefono: 3368531 Cali, Valle, Colombia, mariomejia@hotmail.com

Ama Akha Pakha (*Oriya*)
Dr. Balaram Sahu, 3R BP 5/2, BP Colony, Unit-8,
Bhubaneswar - 751 012, Orissa, balaram_sahu@hotmail.com

Chayan (*Bengali*)
Dr.D.K.Bagchi, Head, Agricultural Science Unit, Indian Statistical
Institute, 203, Barrackpore Trunk Road, Calcutta - 700 035
dkbagchi@isical.ac.in

Loksarvani (*Gujarati*)
Dilip Koradiya, SRISTI P.O.Box 15050
Ahmedabad, Gujarat - 380015, loksarvani@sristi.org

Makhir (*Pahari*)
Dr.A.Chandan, ERA, Khundian, District Kangra,
Himachal Pradesh - 176030, makhir@epatra.com

Num Vali Velanmai (*Tamil*)
P. Vivekanandan, 45, TPM Nagar, Virattipathu
Tamil Nadu - 625 010, numvali@vsnl.com

Sujh-Bujh Aas Paas Ki (*Hindi*)
Shalini Sharma, H-12 ODS Flats Lajpat Nagar 4
New Delhi - 110024, sujhbuj@sristi.org

Tenetiga (Telugu)
Prof.(Mrs.) P. Geervani, 201, Dream Apartment, Road No.3
Banjara Hills, Hyderabad, Andra Pradesh - 500 034

ಸಂಪಾದಕೀಯ

ತಳಿ ಸಂರಕ್ಷಣಾ ಸಂಪ್ರದಾಯದ ಬಂಗಾಡಿ ಕಿಲ್ಲೂರ ದೇವರಾಯರು

ದಕ್ಷಿಣ ಕನ್ನಡದ ಉಜಿರೆಯಿಂದ ಪಶ್ಚಿಮ ಘಟ್ಟದತ್ತ ಮುಖ ಮಾಡಿ 25 ಕಿ.ಮೀ. ಹೋದರೆ ಸಿಗುವ ಕುಗ್ರಾಮಗಳಲ್ಲಿ ಮಿತ್ತಭಾಗಿಲು ಒಂದು. ಬಂಗಾಡಿ ಕಿಲ್ಲೂರ ದೇವರಾಯರು ನಾಟೀ ಬತ್ತದ ತಳಿಗಳನ್ನು ಒಂದು ತಪಸ್ಸಿನ ರೀತಿಯಲ್ಲಿ ಸಂರಕ್ಷಿಸುತ್ತಿರುವ ಓರ್ವ ಮಹಾನ್ ರೈತರು. ಕಂಡು ಕೇಳರಿಯದ ಮೂವತ್ತಕ್ಕೂ ಮಿಕ್ಕ ಬತ್ತದ ತಳಿಗಳನ್ನು ಇವರು ತಮ್ಮ ಹೊಲದಲ್ಲಿ ಕಳೆದ ಹತ್ತಾರು ವರ್ಷಗಳಿಂದ ಸಂರಕ್ಷಿಸಿಕೊಂಡು ಬಂದಿರುವರು. ತಳಿ ಸಂರಕ್ಷಣೆಯನ್ನೇ ಒಂದು ಸಂಪ್ರದಾಯ ***(Tradition of conservation)*** ಮಾಡಿಕೊಂಡಿರುವ ಇವರ ಮಹಾನ್ ಕಾರ್ಯಕ್ಕೆ ಪತ್ನಿ, ಮಕ್ಕಳು, ಸೊಸೆಯಂದಿರೆಲ್ಲಾ ಕೈಗೂಡಿಸಿರುವುದು ಅಷ್ಟೇ ಮಹತ್ವದ ವಿಚಾರ. ತಳಿ ಸಂರಕ್ಷಣೆಯ ಹಿಂದೆ ಅಡಗಿರುವ ಇವರ 'ಪ್ರೇರಣೆ' ಪಶ್ಚಿಮದ ವಿಶ್ಲೇಷಣಾ ಚೌಕಟ್ಟಿನ ವ್ಯಾಪ್ತಿಗೆ ದಕ್ಕುವಂತಹದಲ್ಲ. ಇವರ ತಳಿಗಳ ಗುಣಲಕ್ಷಣಗಳು ಇಳುವರಿ, ವೆಚ್ಚ ಇತ್ಯಾದಿಗಳ ವಿವರಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ ದಾಖಲು ಮಾಡಲಾಗಿದೆ. ಇದರ ವಿಶ್ಲೇಷಣೆ ಇಡೀ ದೇಶಕ್ಕೆ ಬತ್ತದ ತಳಿ ಸಂರಕ್ಷಣೆ ವಿಚಾರದಲ್ಲಿ ಮಾರ್ಗದರ್ಶನ ನೀಡಬಹುದಾಗಿದೆ. ಈ ಮೂಲಕ ಅಗತ್ಯವಿರುವ ಕಾಯಿದೆ, ಪ್ರೋತ್ಸಾಹ ಕ್ರಮಗಳನ್ನು ರೂಪಿಸಿ ಈ ಕಾರ್ಯದಲ್ಲಿ ಮುಂದುವರಿಯಬಹುದಾಗಿದೆ. ಆದರೆ ಇವರ "ಸಂರಕ್ಷಣೆಯ ಸಂಪ್ರದಾಯ" ಪ್ರವೃತ್ತಿಯನ್ನು ಬೇರೆಯವರಲ್ಲೂ ಬಿತ್ತುವಂತಾದಲ್ಲಿ ಅದರಿಂದ ಈ ಮಹತ್ ಕಾರ್ಯಕ್ಕೆ ನಮ್ಮದೇ ಆದ ಒಂದು 'ದೇಶೀತನ' ನೀಡುವುದು ಮಾತ್ರವಲ್ಲ ಅದೊಂದು ಯಶಸ್ವಿ ಮಾದರಿಯೂ ಆಗಬಹುದಾಗಿದೆ.

ಹನಿ ಬಿ ಪತ್ರಿಕಾ ಜಾಲದ ರೂವಾರಿ ನಮ್ಮ ಪ್ರೊ. ಅನಿಲ್ ಗುಪ್ತಾರವರಿಗೆ ಈ ಬಾರಿ ಪದ್ಮಶ್ರೀ ಪುರಸ್ಕಾರ ಸಿಕ್ಕಿದ್ದು ನಮ್ಮ ಸಂತಸಕ್ಕೆ ಮಿತಿಯೇ ಇಲ್ಲವಾಗಿದೆ. ಪ್ರೊ. ಗುಪ್ತಾರವರಿಗೆ ಶುಭ ಹಾರೈಸುತ್ತಾ ಅವರ ಎಲ್ಲಾ ಗುರಿ ಈಡೇರುವಂತಾಗಲು ಅವರಿಗೆ ಸಂಪೂರ್ಣ ಆರೋಗ್ಯ ಮತ್ತು ಅವಕಾಶಗಳು ಸಿಗುವಂತಾಗಲೆಂದು ಹಿತ್ತಲಗಿಡ ಹೃತ್ಪೂರ್ವಕವಾಗಿ ಹಾರೈಸುತ್ತದೆ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಹಿತ್ತಲ ಗಿಡದ ಪೋಷಣೆಗೆ ಸಹಾಯ:
PRITVI (People Rewarding Initiatives in Technology Values & Institutions), Bangalore
SRISTI (Society for Research and Initiatives for Sustainable Technologies and Institutions), Ahmedabad
NIF (National Innovation Foundation, India), New Delhi

ಭತ್ತದ ಕೃಷಿಯ ವಿವಿಧ ದೇಶೀಯ ಹತೋಟಿ ಕ್ರಮಗಳು

ಎಲೆ ಸುರುಳಿ ಹುಳುವಿನ ಹತೋಟಿ

ಮಜ್ಜಿಗೆಯಿಂದ: ಭತ್ತದ ಪೈರಿಗೆ ಎಲೆ ಸುರುಳಿ (leaf roller) ಹುಳುವಿನ ತೊಂದರೆ ಕಾಣಿಸಿದಾಗ ಮಜ್ಜಿಗೆಯನ್ನು ಗದ್ದೆಗೆ ನೀರು ಹೋಗುವ ಕಾಲುವೆಯಲ್ಲಿ ಪ್ರತಿ ಎಕರೆಗೆ ಒಂದು ಚೆಂಬಿನಂತೆ ಬೆಳಗಿನ ವೇಳೆ ಸಣ್ಣಗೆ ಬಿಡಬೇಕು. ಇದು ಪೈರಿಗೆ ಬೀಳುವ ಎಲ್ಲ ತರದ ಕೀಟಗಳನ್ನು ನಿವಾರಿಸುತ್ತದೆ ಎಂಬ ನಂಬಿಕೆ ಆಂಧ್ರಪ್ರದೇಶದ ರಂಗಾರೆಡ್ಡಿ ಜಿಲ್ಲೆಯ ರೈತರದು. ಭತ್ತದ ತೆನೆ ಬೆಳ್ಳಗಾಗಿ, ಜೊಳ್ಳು ಬಿದ್ದರೂ ಕೂಡ ಇದೇ ವಿಧಾನ ಅನುಸರಿಸಬಹುದು.

ಕತ್ತಾಳೆ ಔಷಧಿ: ಒಂದು ಕಿಲೋ ಕತ್ತಾಳೆಯನ್ನು ಒಂದು ಹಿತ್ತಾಳೆ ಪಾತ್ರೆಯಲ್ಲಿ 10 ಲೀ ನೀರಿನಲ್ಲಿ ಹಾಕಿ ಚೆನ್ನಾಗಿ ಬೇಯಿಸಿ ನಂತರ ಸೋಸಿ. ಈ ದ್ರಾವಣಕ್ಕೆ 100 ಗ್ರಾಂ ಬೇವಿನ ಪುಡಿ ಹಾಕಿ ಕಲಸಿ ಭತ್ತಕ್ಕೆ ಸಿಂಪಡಿಸಿದರೆ ಎಲೆ ಸುರಳಿ ಹುಳುವನ್ನು ಹತೋಟಿಯಲ್ಲಿಡಬಹುದು ಎಂಬುದು ದೇವನಹಳ್ಳಿ ತಾಲ್ಲೂಕಿನ, ದೊಡ್ಡ ಕೋಗಿಲು ಗ್ರಾಮದ ರೈತ ಮಲ್ಲೇಶಪ್ಪನವರ ಅನುಭವ.

ಕುದಿಯುವ 10 ಲೀಟರ್ ನೀರಿಗೆ ಒಂದು ಕೆ.ಜಿ. ಕತ್ತಾಳೆ *(Agave sisalana)* ಗಿಡದ ಎಲೆಗಳನ್ನು ಹಾಕಿ ಒಂದು ದಿನ ಹಾಗೆ ಬಿಟ್ಟು ಬಿಡಿ. ಮರು ದಿನ ಸೋಸಿ ಬರುವ ಮೂಲ ದ್ರಾವಣಕ್ಕೆ, ಒಂದು ಲೀಟರ್‌ಗೆ 10 ಲೀಟರ್‌ನಂತೆ ನೀರನ್ನು ಬೆರೆಸಿ ಸಿಂಪಡಿಸಿ ಎನ್ನುತ್ತಿದ್ದರು ತೀರ್ಥಹಳ್ಳಿಯ ದಿವಂಗತ ಶ್ರೀ ಪುರುಷೋತ್ತಮ ರಾವ್‌ರವರು.

ತಾಮ್ರದ ಪಾತ್ರೆಯಲ್ಲಿ 10 ಲೀಟರ್ ನೀರನ್ನು ಹಾಕಿ ಕುದಿಸುತ್ತಾ ಅದಕ್ಕೆ 9 ಕೆಜಿ ಕತ್ತಾಳೆ ಗಿಡದ ಎಲೆಗಳನ್ನು ಹಾಕಿ ಒಂದು ದಿನ ಹಾಗೇ ಬಿಟ್ಟು ಅನಂತರ ಸೋಸಿ ತಿಳಿ ನೀರನ್ನು ಭತ್ತದ ಗಿಡಗಳಿಗೆ ಸಿಂಪಡಿಸುವುದು.

ಕಂದು ಜಿಗಿ ಹುಳುಗಳ ನಿಯಂತ್ರಣ

★ ಕಣಗಲೆ *(Nerium indicum)* ಗಿಡದ ಬೀಜಗಳನ್ನು ಒಂದು ರಾತ್ರಿ ನೀರಿನಲ್ಲಿ ನೆನಸಿ, ಮರುದಿನ ಸೋಸಿ ಸಮ ಪ್ರಮಾಣದಲ್ಲಿ ನೀರನ್ನು ಬೆರೆಸಿ ಸಿಂಪಡಿಸಬೇಕು.

★ ಲೋಳೆರಸ *(Aloe vera)* ದ ಲೋಳೆಯನ್ನು ದನದ ಗಂಜಲದೊಂದಿಗೆ ಬೆರಸಿ ಸಿಂಪಡಿಸಬೇಕು.

★ ತಂಜಾವೂರಿನ ಜಿಲ್ಲೆಯಲ್ಲಿ ಅನೇಕ ರೈತರು ಎಕ್ಕ *(Calotropis gigantea)* ದ ಎಲೆಯನ್ನು ಭತ್ತದ ಗದ್ದೆಯಲ್ಲಿ ಅಲ್ಲಲ್ಲಿ ಹರಡುವರು. ಇದರಿಂದ ಜಿಗಿ ಹುಳುವಿನ ಹತೋಟಿ ಸಾಧ್ಯ ಎಂಬುದು ಅವರ ಅನುಭವ.

★ 10 ಕೆ.ಜಿ. ಭತ್ತದ ತೌಡಿಗೆ 3 ಲೀ. ಸೀಮೆ ಎಣ್ಣೆ ಬೆರೆಸಿ ಸಿಂಪಡಿಸಿದರೆ ಕಂದು ಜಿಗಿ ಹುಳು *(Brown Plant Hopper)* ವಿನ ಹತೋಟಿ ಸಾಧ್ಯ.

★ ಪಶ್ಚಿಮ ಬಂಗಾಳದ ಮಿಡನಾಪುರ ಜಿಲ್ಲೆಯ ರೈತರು ಭತ್ತದ ಜಿಗಿ ಹುಳು *(Dicladispa armigera)* ಮತ್ತು ಕಂದು ಮಚ್ಚೆ ರೋಗ *(Drechslera dryzae)* ವನ್ನು ನಿಯಂತ್ರಿಸಲು ಗುಜರಾತಿ ಭಾಷೆಯಲ್ಲಿ ಪೊರಾಸಿ *(Cleistanth collinus)* ಎಂದು ಕರೆಯುವ ಗಿಡದ ಬಲಿತ ಉದುರಿದ ಎಲೆಗಳನ್ನು ಸಂಗ್ರಹಿಸಿ ಹರಡುತ್ತಾರೆ. ನಂತರ ಮೂರು ದಿನಗಳವರೆಗೆ ಎಲೆ ಹರಡಿದ ಹೊಲಕ್ಕೆ ನೀರು ಹಾಯಿಸುವುದಿಲ್ಲ. ಈ ಪದ್ಧತಿಯಿಂದ ಮಿಡನಾಪುರದ ರೈತರು ಉತ್ತಮ ಫಲಿತಾಂಶಗಳನ್ನು ಕಂಡಿದ್ದಾರಂತೆ.

ಮೂಲ: ಹಿತ್ತಲಗಿಡ, ಪೈರು 3, ಕೊಯಿಲು 3, 1997, ಜುಲೈ-ಡಿಸೆಂಬರ್

ಮುಕ್ಕಡಕ ದ್ರಾವಣ

ತೀರ್ಥಹಳ್ಳಿ ತಾಲ್ಲೂಕಿನ ಸರು ಗ್ರಾಮದ ಯುವ ಉತ್ಸಾಹಿ ಕೃಷಿಕ ಶ್ರೀ ಬಿ.ಎಸ್. ದಿನೇಶ್ ಕಳೆದೆರಡು ವರ್ಷಗಳಿಂದ ಭತ್ತದ ಬೇಸಾಯದಲ್ಲಿ ಕೀಟ ಹತೋಟಿಗೆ ಯಾವುದೇ ರಾಸಾಯನಿಕಗಳನ್ನು ಕೊಂಡುಕೊಳ್ಳದೆ ಸಾವಯವ ಕೃಷಿಗೆ ಮೊರೆ ಹೋಗಿರುವರು. ಇವರು "ಮುಕ್ಕಡಕ" ಎಂಬ ಗಿಡದ ದ್ರಾವಣ ತಯಾರಿಸಿ ಗದ್ದೆಗೆ ಸಿಂಪಡಿಸಿ ಯಶಸ್ವಿಯಾಗಿದ್ದಾರೆ. ಸಿಂಪಡನಾ ದ್ರಾವಣ ತಯಾರಿಸುವ ವಿಧಾನ ಈ ಕೆಳಕಂಡಂತಿದೆ.

10 ಲೀಟರ್ ನೀರಿಗೆ 1 ಕೆ.ಜಿ. ಮುಕ್ಕಡಕ ಸೊಪ್ಪನ್ನು ಹಾಕಿ ಒಲೆಯ ಮೇಲಿಟ್ಟು ಕುದಿಸಿದ ನಂತರ ಒಂದು ಲೀಟರ್ ಶುಭ್ರವಾದ ದ್ರಾವಣವನ್ನು 10 ಲೀಟರ್ ನೀರಿನಲ್ಲಿ (1:10) ಬೆರೆಸಿ ಬೆಳೆಗೆ ಸಿಂಪಡಿಸಬೇಕು. ಮುಕ್ಕಡಕ ದ್ರಾವಣವನ್ನು ಭತ್ತದ ಗದ್ದೆಗೆ ಒಟ್ಟು ಎರಡು ಬಾರಿ ಸಿಂಪಡಿಸಬೇಕು.

ಅಗೇಡಿ (Nursery) ಯಲ್ಲಿ ಒಂದು ಬಾರಿ ಸಿಂಪಡಿಸಿದರೆ ಇದರಿಂದ ಅನೇಕ ಕೀಟಗಳು ಪ್ರಾರಂಭ ಹಂತದಲ್ಲೇ ಹತೋಟಿಗೆ ಬರುತ್ತವೆ. ನಾಟಿಯಾದ ಮೇಲೆ ಇದರಿಂದ ಜಿಗಿಹುಳು, ಬಿಳಿ ನೊಣ ಇತ್ಯಾದಿ ಕೀಟಗಳನ್ನು ನಿಯಂತ್ರಿಸಬಹುದು.

ಪರಿಣಾಮ

ಅ) ಮುಕ್ಕಡಕ ದ್ರಾವಣ ಸಿಂಪಡನೆಯಿಂದ ಭತ್ತದ ಬೆಳೆಯಲ್ಲಿ ಜಿಗಿಹುಳು, ಕಂದು ಜಿಗಿಹುಳು ಹಾಗೂ ಇತರ ಕೀಟಗಳನ್ನು ನಿಯಂತ್ರಿಸಲು ಸಾಧ್ಯ.

ಆ) ಮುಕ್ಕಡಕ ದ್ರಾವಣವನ್ನು ಸಿಂಪಡಿಸಿದಾಗ ಏಡಿಗಳು ಭತ್ತದ ಗಿಡದ ಬಳಿ ಸುಳಿಯುವುದೇ ಇಲ್ಲವಂತೆ.

ಇ) ಮುಕ್ಕಡಕ ಸೊಪ್ಪನ್ನು ಉತ್ತಮ ಹಸಿರೆಲೆ ಗೊಬ್ಬರವಾಗಿಯೂ ಉಪಯೋಗಿಸಬಹುದು.

ಸೂಚನೆ: ಮುಕ್ಕಡಕ ದ್ರಾವಣವನ್ನು ಸಸ್ಯಕ್ಕೆ ಸಿಂಪಡಿಸಿದ್ದರಿಂದ ಕೆಲವರಿಗೆ ಮುಖ ಊದಿಕೊಳ್ಳುವುದು, ಮೈಕೈ ಕಡಿತ ಬಂದಿರುವ ಬಗ್ಗೆ ಮಾಹಿತಿಯಿದೆ. ಹಾಗಾಗಿ ಸಿಂಪಡಿಸುವ ವೇಳೆಯಲ್ಲಿ ಎಚ್ಚರಿಕೆ ಅತ್ಯಗತ್ಯ.

ಪಶ್ಚಿಮ ಘಟ್ಟ ಪ್ರದೇಶದಲ್ಲಿ ಅಡಿಕೆ ಬೆಳೆಗಾರರಾಗಿರುವ ಶ್ರೀ ದಿನೇಶ್‌ರವರ ಈ ಅನುಶೋಧನೆಗೆ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಸ್ಪರ್ಧೆಯ ಕೃಷಿ ವಿಭಾಗದಲ್ಲಿ ಸಮಾಧಾನಕರ ಬಹುಮಾನ ಬಂದಿರುತ್ತದೆ.

ಮೂಲ: ಹಿತ್ತಲಗಿಡ, ಪೈರು 2, ಕೊಯಿಲು 1, 1996,

ಬೆಂಕಿ ರೋಗ

ರೈತನ ಕನಸನ್ನೇ ಸುಟ್ಟು ಬಿಡುವ ಈ ರೋಗ ಶಿಲೀಂಧ್ರದಿಂದ ಆಚೀಚೆ ಹರಡುತ್ತದೆ. ಕೃತಕ ರಾಸಾಯನಿಕ ಗೊಬ್ಬರ ಬಳಸುವವರ ಹೊಲದಲ್ಲಿ ಬೆಂಕಿರೋಗದ ವ್ಯಾಪಕತೆ ಹೆಚ್ಚು ಎನ್ನುವುದು ಉತ್ತರ ಕನ್ನಡದ ಹುಲ್ಯ ಬನವಾಸಿಯ ಸಿದ್ದಿ ಜನಾಂಗಕ್ಕೆ ಸೇರಿದ ಕೃಷಿಕರ ನಂಬಿಕೆ.

ಹೆಚ್ಚಾಗಿ ಪೇಟೆಯ ಪರಿಚಯವಿರದ ಈ ಜನಾಂಗಕ್ಕೆ ಕಾಡಿನ ಶಿಕ್ಷಣ ರಕ್ತಗತ. ಯಾವ ಮರ, ಯಾವ ರೋಗಕ್ಕೆ ಮದ್ದಾದೀತು ಎಂಬ ಮಾಹಿತಿ, ಹಿರಿಯರು ಮಾಡುವಾಗ ಕಿರಿಯರಿಗೆ ಲಭ್ಯ. ಹೀಗೆ ಹೇಳುವುದಾದರೆ ಕವರು (ಕೌಲು) *(Careya arborea)* ಮರದ ಚಕ್ಕೆ ಬೆಂಕಿ ರೋಗಕ್ಕೆ ಔಷಧ. ಸುಮಾರು ಒಂದು ಎಕರೆಗೆ 2 ಕೆ.ಜಿ ಯಷ್ಟು ಚಕ್ಕೆಯನ್ನು, ಗದ್ದೆಯ ಹಾಳೆಗೆ ನೀರು ಹೋಗುವ ಜಾಗದಲ್ಲಿ ಹಾಕುತ್ತಾರೆ. ಚಕ್ಕೆಯ ಔಷಧ ಗುಣ ನೀರಿನ ಮೂಲಕ ಗದ್ದೆಯ ತುಂಬ

ದೇಶೀಯ ಹತೋಟಿ ಕ್ರಮಗಳು

ವಿಸ್ತರಿಸುವುದರ ಜೊತೆಗೆ ಆ ಮುಗ್ಧ ವನವಾಸಿಗಳ ಕನಸಿಗೂ ಹೊಸ ಹೊಸ ಕವಲುಗಳನ್ನು ಮೂಡಿಸುತ್ತವೆ.

ಭತ್ತಕ್ಕೆ ಸಾಮಾನ್ಯವಾಗಿ ಎಲ್ಲಾ ಹಂತದಲ್ಲೂ ಬೀಳುವ ಬೆಂಕಿ ರೋಗ/ಕೆಂಪು ಕೊಳೆ *(Pyrivlaria oryze)* ರೋಗಕ್ಕೆ ಕವಲು ಮರದ ತೊಗಟೆಯನ್ನು ಜಜ್ಜಿ, ಅದರ ರಸವನ್ನು ಭತ್ತದ ಗದ್ದೆಯಲ್ಲಿ ಹರಿಯ ಬಿಡುವ ಮೂಲಕ ಶಮನ ಮಾಡಬಹುದಂತೆ.

ಮೂಲ: ಹಿತ್ತಲಗಿಡ, ಸಂಚಿಕೆ 2-3, 1995

ಕಾಂಡ ಕೊರೆಯುವ ಹುಳುಗಳಿಗೆ

ಒಂದೆರಡು ದಿನ ಬತ್ತದ ಗದ್ದೆಯಲ್ಲಿ ಸಾಕಷ್ಟು ಚೆನ್ನಾಗಿ ನೀರು ಕಟ್ಟುವುದರಿಂದ ಹುಳುಗಳು ನಿಯಂತ್ರಣಕ್ಕೆ ಬರುತ್ತವೆ.

ಅಡಿಕೆ ಹಿಕ್ಕೆಗಳನ್ನು ಗದ್ದೆಯ ಸುತ್ತಲೂ ಹರಡಿದಾಗ ಹುಳುವಿನ ಬಾಧೆ ಕಡಿಮೆಯಾಗುತ್ತದೆ.

ಮಾನಕ *(Alocasia indica)* ದ ಕೊಂಬೆ ಮತ್ತು ಎಲೆಗಳನ್ನು ಕತ್ತರಿಸಿ ಹಾಕುವುದರಿಂದ ಕೂಡ ಹುಳುಗಳು ಹತೋಟಿಗೆ ಬರುತ್ತವೆ ಎಂಬುದು ಅಸ್ಸಾಂನ ರೈತರ ಅನುಭವ.

ಮೂಲ: ಹಿತ್ತಲಗಿಡ, ಪೈರು 5, ಕೊಯಿಲು 3, ಸೆಪ್ಟೆಂಬರ್-ಡಿಸೆಂಬರ್, 1999

ತ್ರಿಪುರ ಪ್ರದೇಶದಲ್ಲಿ ಸ್ಥಳೀಯವಾಗಿ ಕುಚ್ಚ ಎಂದು ಕರೆಯುವ ಕೊಡಚೆಗಾ / ಕುರ್ಚಿ ಗಿಡ *(Adhatoda vasika)* ವನ್ನು ಭತ್ತದ ಕಾಂಡ ಕೊರಕ ನಿಯಂತ್ರಣಕ್ಕೆ ಉಪಯೋಗಿಸುತ್ತಾರೆ. ಈ ಗಿಡದ ಗೆಲ್ಲುಗಳನ್ನು ಮುಂಗಾರು ಭತ್ತದ ಗದ್ದೆಗಳಲ್ಲಿ ಎಳೆದಾಡುವುದರಿಂದ ಶೇ.70ರಷ್ಟು ನಿಯಂತ್ರಣ ಸಾಧ್ಯವಂತೆ. ಸುಮಾರು 30-40 ಗೆಲ್ಲುಗಳನ್ನು 0.16 ಹೆಕ್ಟೇರ್ ಜಾಗದಲ್ಲಿ ಎಳೆಯುತ್ತಾರೆ.

ಗೇರು ಟೊಂಗೆಗಳನ್ನು ಭತ್ತದ ಗದ್ದೆಯಲ್ಲಿ ಅಲ್ಲಲ್ಲಿ ಹರಡುವುದರಿಂದ ಕಾಂಡ ಕೊರಕದ ಹತೋಟಿ ಸಾಧ್ಯ. ಸೆಣಬಿನ ಬೀಜವನ್ನು ಒಂದು ರಾತ್ರಿಯಲ್ಲಿ ನೆನಸಿ ನೀರಿನೊಂದಿಗೆ ಸಮಪ್ರಮಾಣದಲ್ಲಿ ಬೆರಸಿ ಸಿಂಪಡಿಸಬೇಕು.

ಮೂಲ: ಹಿತ್ತಲಗಿಡ, ಪೈರು 3, ಕೊಯಿಲು 2-3, ಏಪ್ರಿಲ್-ಸೆಪ್ಟೆಂಬರ್, 1998

ಎಕ್ಕದ ಕಷಾಯ

ಹತ್ತು ಲೀಟರ್ ನೀರಿನಲ್ಲಿ ಒಂದು ಕಿಲೋ ಎಕ್ಕದ ತಾಜಾ ಎಲೆಗಳನ್ನು ತುಂಡು ತುಂಡಾಗಿ ಮಾಡಿ ನೆನೆ ಹಾಕಿ, ಬಿಸಿ ನೀರಾದರೆ 24 ಗಂಟೆ ನೆನೆಸಿಟ್ಟರೆ ಸಾಕು. ತಣ್ಣೀರಾದರೆ 6 ರಿಂದ 8 ದಿನಗಳು ನೆನೆಸಿಡಿ, ನಂತರ ಕುದಿಸಿ ಕಷಾಯವನ್ನು 10 ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಬೆಳೆಗೆ ಸಿಂಪಡಿಸಬೇಕು. ಇದರಿಂದ ಎಲೆ ಕತ್ತರಿಸುವ, ಕಾಂಡ ಕೊರೆಯುವ ಹುಳುಗಳ ನಿಯಂತ್ರಣವಾಗುತ್ತದೆ. ಹೀಗೆ ತಯಾರಿಸಿದ ಕಷಾಯವನ್ನು ಸಂಜೆ ವೇಳೆ ಗಿಡಗಳ ಬುಡದಲ್ಲಿ ಹಾಕಿದರೆ ಮಣ್ಣಿನಲ್ಲಿ ಅಡಗಿ ಕೂತಿರುವ ಬೇರು ತಿನ್ನುವ ಹುಳು, ಜರಿ ಹುಳು, ಕಾಂಡ ಕೊರೆಯುವ ಹುಳು ನಿಯಂತ್ರಣವಾಗುತ್ತದೆ. ನಮ್ಮ ಪೂರ್ವಿಕರು ಭತ್ತದ ಮಡಿಯಲ್ಲಿ ಇದರ ಎಲೆ ಹಾಕಿ ನಂತರ ನಾಟಿ ಮಾಡುವ ರೂಢಿ ಇತ್ತು. ಇದರಿಂದ ಮಣ್ಣು, ರೋಗ ಮುಕ್ತವಾಗುತ್ತದೆಂಬ ನಂಬಿಕೆ.

ತೆನೆ ತಿಗಣೆ

ಫೈಜಾಬಾದ್ ಜಿಲ್ಲೆಯ ರೈತರು ಬತ್ತದ್ದ ಗದ್ದೆಯಲ್ಲಿ ಕಂಡು ಬರುವ 'ತೆನೆ ತಿಗಣೆ' (Gundhi Bug) ನಿಯಂತ್ರಣಕ್ಕೆ ಹಳೆಯ ಸೈಕಲ್ ಟಯರ್‌ನ್ನು ಸುಟ್ಟು ಗದ್ದೆಯ ಸುತ್ತ ಹೊಗೆ ಬರುವಂತೆ ಅದನ್ನು ಎಳೆದುಕೊಂಡು ಹೋಗಿ ಗಾಳಿ ಬೀಸುವ ದಿಕ್ಕಿನಲ್ಲಿ ನೇತು ಹಾಕುತ್ತಾರೆ. ಟಯರ್ ಸುಟ್ಟ ವಾಸನೆ ಕೀಟವನ್ನು ಓಡಿಸುತ್ತದೆ ಎನ್ನುವುದು ಅವರ ಅನುಭವ.

- ★ ಗ್ಲಿರಿಸೀಡಿಯ ಗೊಬ್ಬರದ ಗಿಡದ ಟೊಂಗೆಗಳನ್ನು ಭತ್ತದ ಗದ್ದೆಯಲ್ಲಿ ಹರಡುವುದರಿಂದ ತೆನೆ ತಿಗಣೆ ಹತೋಟಿ ಸಾಧ್ಯ.
- ★ ಭತ್ತ ದುಂಡಾಡುವ ಮುನ್ನ ಒಂದು ಕುಂಟೆಗೆ ಒಂದು ಜೇಡರ ಹುಳವನ್ನು ಬಿಡಬೇಕು. ಭತ್ತದ ತೆನೆ ಹೊರ ಬರುವ ವೇಳೆಗೆ ಗದ್ದೆ ತುಂಬಾ ಬಲೆ ಹರಡಿ ಇದು ಭತ್ತದ ತೆನೆಗೆ ಬರುವ ತೆನೆ ತಿಗಣೆ ತಿನ್ನುತ್ತದೆ.

ಮೂಲ: ಹಿತ್ತಲಗಿಡ, ಪೈರು 3, ಕೊಯಿಲು 3, ಜುಲೈ-ಡಿಸೆಂಬರ್ 1997

ಇತರ ಕೀಟ ನಿಯಂತ್ರಣ

ತಮಿಳುನಾಡಿನ ಪೆರಂಬದೂರಿನ ಜಿಲ್ಲೆಯ ರೈತರು ಅನಾದಿ ಕಾಲದಿಂದಲೂ ರೂಢಿಸಿಕೊಂಡಿರುವ ವಿಧಾನವೆಂದರೆ, ಭತ್ತದ ಸಸಿ ನಾಟಿ ಮಾಡುವ ಮುಂಚೆ ನೀರು ನಿಂತ ಒಂದು ಮಡಿಯಲ್ಲಿ ಬೂದಿ ಹಾಗೂ ಬೇವಿನ ಬೀಜದ ಪುಡಿಯನ್ನು ಬೆರೆಸಿಡುತ್ತಾರೆ. 15 ಚದರ ಅಡಿ ಮಡಿಗೆ ಅರ್ಧ ಕೆ.ಜಿ. ಪುಡಿ ಮಾಡಿದ ಬೇವಿನ ಬೀಜ ಹಾಗೂ 1 ಕೆ.ಜಿ. ಬೂದಿ ಸಾಕಾಗುತ್ತದೆ. ಈ ದ್ರಾವಣದಲ್ಲಿ 50 ಕಟ್ಟು ನಾಟಿ ಸಸಿಗಳನ್ನು ಇಡಬಹುದು. ಅರ್ಧ ಗಂಟೆಯಿಂದ 1 ಗಂಟೆ ಇಟ್ಟರೆ ಸಾಕು. ಹೀಗೆ ಉಪಚಾರ ಪಡೆದ ಸಸಿಗಳು ಕೀಟ ಹಾಗೂ ರೋಗಗಳಿಂದ ಮುಕ್ತವಾಗಿರುತ್ತವೆ.

ಸಂಗ್ರಹ ಲೇಖನ: ಸೌಜನ್ಯ

ರಸ ಹೀರುವ ಹುಳುಗಳ ಹತೋಟಿ

ಹಾಸನದ ನಮ್ಮ ಸಾವಯವ ಕೃಷಿಕ ಬಸವರಾಜುರವರು ತಮ್ಮ ಭತ್ತದ ಪೈರನ್ನು ಹಾಳು ಮಾಡುತ್ತಿದ್ದ ರಸ ಹೀರುವ ಹುಳುಗಳನ್ನು ನಿಯಂತ್ರಿಸಲು ಕತ್ತೆ ಗಂಜಲವನ್ನು ಶೇಖರಿಸಿ ತಂದು ಸಿಂಪಡಿಸುತ್ತಾರಂತೆ.

ಬಸವರಾಜು ಸಂತೆಶಿವರರ ಕ್ರಮಗಳು

ತೆಂಗಿನ ನುಸಿಗೆ ನುಸಿ ಗುಳಿಗೆ

5 ಗ್ರಾಂ ಇಂಗು, 2.5 ಗ್ರಾಂ ಪಚ್ಚೆ ಕರ್ಪೂರ ಮತ್ತು 2.5 ಗ್ರಾಂ ನುಸಿ ಗುಳಿಗೆಗಳನ್ನು ಪುಡಿ ಮಾಡಿ, ಮಿಶ್ರ ಮಾಡಿ ತೆಂಗಿನ ಮರದಲ್ಲಿ ಹೊಸದಾಗಿ ಬರುವ ಹೊಂಬಾಳೆ ಕೆಳಭಾಗಕ್ಕೆ (ಚಿತ್ರದಲ್ಲಿ ತೋರಿಸಿದಂತೆ) ಇಟ್ಟರೆ ಇದರಿಂದ ಬರುವ ವಾಸನೆಗೆ ನುಸಿ ಪೀಡೆ ನಿಯಂತ್ರಿಸಲು ಸಾಧ್ಯ ಎಂಬುದು ಚನ್ನರಾಯಪಟ್ಟಣ ತಾಲ್ಲೂಕು ಸಂತೇಶಿವರದ ಬಸವರಾಜುರವರ ಅಭಿಪ್ರಾಯ.

ಕಾಂಡ ಕೊರಕ ಮತ್ತು ಮಿಡತೆ ಹಾವಳಿಗೆ ತಡೆ

ನಿಂಬೆ ಬೆಳೆಯಲ್ಲಿ ಕಾಂಡ ಕೊರಕದ ಹತೋಟಿಗೆ ಎರಡು ಗ್ರಾಂ ಇಂಗನ್ನು ನಿಂಬೆ ಗಿಡಕ್ಕೆ ಕಟ್ಟಿ ತೂಗು ಹಾಕಿ ಎಂಬ ಸಲಹೆ ಇವರದು. ಇದನ್ನು ಆಗಸ್ಟ್ ತಿಂಗಳಲ್ಲೇ ಮಾಡುವುದು ಸೂಕ್ತವಂತೆ. ಇವರು ವೀಳ್ಯದೆಲೆ ಬೆಳೆಯ ಮಿಡತೆ ಹಾವಳಿಯನ್ನು ಪಚ್ಚೆ ಕರ್ಪೂರದಿಂದ ನಿವಾರಿಸಿದ್ದಾರೆ.

ಪಶು ಚಿಕಿತ್ಸಾ ನಿಪುಣೆ ಜಯಮ್ಮ

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಮೈಕಲೂರಿನ ಹಳ್ಳಿಯ ರೈತ ಮಹಿಳೆ ಟಿ.ಕೆ. ಜಯಮ್ಮ ಹಲವು ಪಶು ರೋಗಗಳಿಗೆ ಚಿಕಿತ್ಸೆ ನೀಡಬಲ್ಲ ನಿಪುಣೆ. ತಮ್ಮ ಈ ನೈಪುಣ್ಯತೆಯಿಂದ ಕಳೆದ ಹಲವು ವರ್ಷಗಳಿಂದ ಪಶುಗಳ ರೋಗಗಳಿಗೆ ಪರಿಣಾಮಕಾರಿ ಔಷಧಿ ನೀಡುತ್ತಾ ಬಂದಿದ್ದಾರೆ. ಈ ಔಷಧಿಗಳನ್ನು ಇವರ ಜೊತೆಗೆ ಇನ್ನೂ ಹಲವು ಗ್ರಾಮಸ್ಥರು ಅನುಸರಿಸುತ್ತಿದ್ದಾರೆ. ಇವರ ಕೆಲವು ಪಶು ಔಷಧಿಗಳನ್ನು ಇಲ್ಲಿ ಕೊಡಲಾಗಿದೆ.

ಕಾಲುಬಾಯಿ ರೋಗಕ್ಕೆ ಔಷಧಿ

ತೊರೆಪತಗ (ತುಮ್ರಿ-*Diospyros crummenata*)ದ ದ್ರಾವಣವನ್ನು ತಯಾರಿಸಿಕೊಂಡು ಬಾಯಿಯ ಹುಣ್ಣನ್ನು ದಿನಕ್ಕೆ ಎರಡು-ಮೂರು ಬಾರಿ ಚೆನ್ನಾಗಿ ತೊಳೆಯಿರಿ. ತೊಳೆದ ಮೇಲೆ ಹುಣಿಸೆಹಣ್ಣು ಮತ್ತು ಉಪ್ಪಿನ ಮಿಶ್ರಣವನ್ನು ಮಾಡಿಕೊಂಡು ಗಾಯದ ಮೇಲೆ ಉಜ್ಜಿ. ನಂತರ ದಿನಕ್ಕೆರಡು ಬಾರಿ ಬಿಸಿನೀರಿನಿಂದ ತೊಳೆದು ಸ್ವಚ್ಛ ಮಾಡಿದರೆ ಕಾಲುಬಾಯಿ ರೋಗ ದೂರವಾಗುತ್ತದೆ.

ಗರ್ಭಪಾತ ತಡೆಗೆ

ಪಶುಗಳಲ್ಲಿ ಪದೇ ಪದೇ ಗರ್ಭಪಾತವಾಗುತ್ತಿದ್ದರೆ ಕುಂಟಿಗನ ಬೇರು *(Jateorhiza clumba)*, ಆಡುಮುಟ್ಟದ ಬೇರು *(Tylophora asthmatica)* ಮತ್ತು ಲಕ್ಕಿ *(Vitex negundo)* ಎಲೆಗಳನ್ನು ಬೆಳ್ಳುಳ್ಳಿ ಮತ್ತು ಮೆಣಸಿನೊಂದಿಗೆ ಮಿಶ್ರ ಮಾಡಿ ದಿನಕ್ಕೆ ಎರಡು ಬಾರಿಯಂತೆ ತಿನ್ನಿಸಿದರೆ ಗರ್ಭಪಾತ ನಿಲ್ಲುತ್ತದೆ.

ಮಲಬದ್ಧತೆ ನಿವಾರಣೆಗೆ

ಪಶುಗಳ ಮಲಬದ್ಧತೆ ನಿವಾರಿಸಲು ಐದರಿಂದ ಆರು ಕೆಂಪು ಮೆಣಸಿನ ಕಾಯಿಗಳನ್ನು ಒಂದು ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ದಿನಕ್ಕೆ ಎರಡು ಬಾರಿಯಂತೆ ಕುಡಿಸಬೇಕಂತೆ!.

ನುಣುಚಿದ ಹೆಗಲಿಗೆ ತೊಂಡೆ ಎಲೆ

ತೊಂಡೆ *(Coccinea indica)* ಎಲೆ ಮತ್ತು ಮೆಣಸುಗಳನ್ನು ಸಮ ಪ್ರಮಾಣದಲ್ಲಿ ಮಕ್ಕಳ ಮೂತ್ರದೊಂದಿಗೆ ಮಿಶ್ರಮಾಡಿ ಒಂದೊಂದೇ ತೊಟ್ಟಿನಂತೆ ಹೆಗಲು ನುಣುಚಿದ ದನಗಳ ಕಿವಿಗೆ ಹಾಕಿ ನೋವು ನಿವಾರಣೆ ಮಾಡಬಹುದಂತೆ.

ಕೆಮ್ಮು ನಿಯಂತ್ರಣ

ಕೆಂಪು ಮೆಣಸಿನ ಕಾಯಿ, ಬೆಳ್ಳುಳ್ಳಿ, ಮೆಣಸು ಮತ್ತು ಮುಂಗರ ಬಳ್ಳಿ *(Cissus quadrangularis)* ಗಳನ್ನು ಸಮಪ್ರಮಾಣದಲ್ಲಿ ಬೆರೆಸಿ ತುಪ್ಪದೊಂದಿಗೆ ಕಾಯಿಸಿ ದಿನಕ್ಕೆ ಎರಡರಿಂದ ಮೂರು ಬಾರಿಯಂತೆ ಕೆಮ್ಮಿನಿಂದ ನರಳುತ್ತಿರುವ ಪ್ರಾಣಿಗಳಿಗೆ ತಿನ್ನಿಸಿದರೆ ಕೆಮ್ಮು ನಿಯಂತ್ರಣ ಸಾಧ್ಯವಂತೆ.

ಸಂಗ್ರಹ: ಶಶಿಕಲಾ, ಎಸ್.ಜಿ.

ಸುಧಾರಿತ ತಳಿಗಳ ಕೆಚ್ಚಲು ಬಾವಿಗೆ ಮದ್ದು

ಪಶುಗಳ ಸುಧಾರಿತ ತಳಿಗಳಲ್ಲಿ ಕೆಚ್ಚಲು ಬಾವು ಬಂದು ಅದಿನ್ನೂ ಪ್ರಾರಂಭಿಕ ಹಂತದಲ್ಲಿದ್ದರೆ ನೂರು ಗ್ರಾಂ ಬೇವಿನ ಚಕ್ಕೆ ಮತ್ತು ನೂರು ಗ್ರಾಂ ಬುಗುರಿ ಚಕ್ಕೆಗಳನ್ನು ಪುಡಿ ಮಾಡಿ ಒಂದು ಲೀಟರ್ ನೀರಿನಲ್ಲಿ ನೆನೆಹಾಕಿ ಒಂದು ಗಂಟೆಯ ನಂತರ ಚಕ್ಕೆ ಪುಡಿಯನ್ನು ಬೇರ್ಪಡಿಸಿ ಮುಸುರೆ (ಕಲಗಚ್ಚು) ನೀರಿಗೆ ಹಾಕಿ ಕುಡಿಸಿದರೆ ಬಾಧೆ ನಿವಾರಣೆಯಾಗುತ್ತದೆ ಎಂಬುದು ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಹೊಸಹಳ್ಳಿಯ ಸಣ್ಣೇಗೌಡರ ಅಭಿಪ್ರಾಯ. ಹೀಗೆ ಮೂರು ದಿನ ಕುಡಿಸಬೇಕಂತೆ.

ಸಂಗ್ರಹ: ಬಸವರಾಜು ಸಂತೇಶಿವರ

ಪಶುಗಳ ಕೊಟ್ಟಿಗೆಯಲ್ಲಿ ಹೇನುಗಳ ನಿವಾರಣೆ

ಕಗ್ಗಲಿ ಅಥವಾ ಕಾಚು *(Acacia catechu)* ಹಣ್ಣಿನ ತೊಟ್ಟಿನ ಬಳಿ ಒಂದು ತೂತು ಮಾಡಿ ಬೀಜ ಮತ್ತು ತಿರುಳನ್ನು ತೆಗೆದು ನಾಲ್ಕರಿಂದ ಐದು ಖಾಲಿ ಹಣ್ಣುಗಳನ್ನು ಕೊಟ್ಟಿಗೆಯಲ್ಲಿ ಅಲ್ಲಲ್ಲೇ ನೇತು ಹಾಕಿದರೆ ಪಶುಗಳ ಕಿವಿ, ಮೂತಿಗಳ ಬಳಿ ಹಾರಾಡುವ ಸೊಳ್ಳೆ ರೀತಿಯ ಹುಳುಗಳನ್ನು *(Ticks)* ಕೊಟ್ಟಿಗೆಯಿಂದ ನಿವಾರಿಸಬಹುದು ಎಂಬುದು ಒರಿಸ್ಸಾದ ದುರ್ಯೋಧನ ಬಿಸ್ವಾಲರ ಅನುಶೋಧನೆ. ಇವರ ಪ್ರಕಾರ ಹುಳುಗಳು ಹಣ್ಣುಗಳ ವಾಸನೆಯಿಂದಾಗಿ ಕೊಟ್ಟಿಗೆಯಿಂದ ಹಿಮ್ಮೆಟ್ಟುತ್ತವೆಯಂತೆ.

ಜ್ವರಕ್ಕೆ ಮೊಟ್ಟೆ ಮದ್ದು

ಮೂರರಿಂದ ನಾಲ್ಕು ಮೊಟ್ಟೆಗಳನ್ನು ತೆಗೆದುಕೊಂಡು ಅವುಗಳ ಹಳದಿ ಭಾಗವನ್ನು ಬೇರ್ಪಡಿಸಿ ಸುಮಾರು 200 ಮಿ.ಲೀ. ಸಾಸಿವೆ ಎಣ್ಣೆಯೊಂದಿಗೆ ಬೆರೆಸಿ. ಈ ಮಿಶ್ರಣವನ್ನು ಜ್ವರದಿಂದ ನರಳುತ್ತಿರುವ ಪ್ರಾಣಿಗಳ ಮೈಗೆ ಹಚ್ಚಿ. ಹೀಗೆ ಹಚ್ಚಿದ ಎಂಟರಿಂದ ಹತ್ತು ಗಂಟೆಗಳ ಒಳಗಾಗಿ ಪ್ರಾಣಿಗಳು ಜ್ವರದಿಂದ ಮುಕ್ತವಾಗುತ್ತವೆ ಎಂಬುದು ಒರಿಸ್ಸಾದ ಸುಂದರ್‌ಗರ್ ಜಿಲ್ಲೆಯ ಮಾಗುಣಿ ಚರಣ್ ಸಾಹು ಅವರ ಅನುಭವ.

ಮೂಲ: ಹನಿ.ಬೀ 14(2), ಜೂನ್ 2003

ನಾರಾಯಣರೆಡ್ಡಿಗೆ ನಾಡೋಜ ಪ್ರಶಸ್ತಿ

ಇದೇ ಜನವರಿ 5ರಂದು, ಹಂಪೆ ನಾಡ ಹಬ್ಬದ ವಿಶೇಷ ಸಂದರ್ಭದಲ್ಲಿ ಹಂಪೆ ವಿಶ್ವವಿದ್ಯಾಲಯ ನಮ್ಮ ಸಾವಯವ ಕೃಷಿ ಋಷಿ ಸೋರಹುಣಸೆ ನಾರಾಯಣ ರೆಡ್ಡಿಯವರಿಗೆ ನಾಡ ಗುರು [ಡಾಕ್ಟರೇಟ್] "ನಾಡೋಜ" ಪ್ರಶಸ್ತಿ ನೀಡಿ ಸನ್ಮಾನಿಸಿರುತ್ತದೆ. ಕರ್ನಾಟಕದಲ್ಲಿ ಸಾವಯವ ಕೃಷಿಯನ್ನು ಹುಟ್ಟು ಹಾಕುವಲ್ಲಿ ಅಪಾರ ಕೊಡುಗೆ ನೀಡಿರುವ ಶ್ರೀಯುತ ರೆಡ್ಡಿಯವರಿಗೆ ಸಂದ ಈ ಗೌರವ, ಸಾವಯವ ಕೃಷಿ ಆಂದೋಲನಕ್ಕೆ ದೊರೆತ ಗೌರವವೂ ಆಗಿರುತ್ತದೆ.

ಸಂ.

ಶೀಘ್ರ ಮೊಳಕೆಗೆ ಎರಡು ದೇಶೀಯ ವಿಧಾನಗಳು:

ಗುಜರಾತಿನ ವಲ್ಸಾಢ್ ಜಿಲ್ಲೆಯ ಧೀರುಬಾಯಿ ಪಟೇಲ್ ಎಂಬ ರೈತರು ಒಮ್ಮೆ ಮಂತ್ರವಾದಿಯೊಬ್ಬ ಮಾವಿನ ವಾಟೆಯನ್ನು ಎಕ್ಕದ ಹಾಲಿ (*Calotropis gigantea*) ನಲ್ಲಿ ಅದ್ದಿ ಅದು ಅತಿ ಬೇಗ ಮೊಳಕೆ ಒಡೆಯುವಂತೆ ಮಾಡಿದ್ದನ್ನು ನೋಡಿದರು. ಇದರಿಂದ ಆಶ್ಚರ್ಯಚಕಿತರಾದ ಇವರು ಈ ಪ್ರಯೋಗವನ್ನು ಬೆಂಡೆ ಬೀಜಗಳಿಗೆ ಮಾಡಲು ನಿರ್ಧರಿಸಿದರು. ಬೆಂಡೆ ಬೀಜಗಳನ್ನು ಆರುಗಂಟೆಗಳ ಕಾಲ ಎಕ್ಕದ ಹಾಲಿನಲ್ಲಿ ನೆನೆಸಿ ಬಿತ್ತನೆ ಮಾಡಿದಾಗ ಅಚ್ಚರಿಯಾಗುವ ರೀತಿಯಲ್ಲಿ ಬಿತ್ತಿದ ಮರುದಿನವೇ ಬೀಜಗಳು ಮೊಳಕೆಯೊಡೆದವು.

ಇನ್ನು ಮಳೆಯಾಶ್ರಿತದಲ್ಲಿ ಸಾಸಿವೆ (rape seed) ಬೆಳೆಯುವಾಗ ಶೀಘ್ರ ಮೊಳಕೆ ಬರಿಸುವುದು ಅವಶ್ಯಕ. ಇದಕ್ಕಾಗಿ ಗುಜರಾತಿನ ಮೆಹಸಾನ ಜಿಲ್ಲೆಯ ರೈತ ಅಮೃತ ಬಾಯಿ ರಾಬರಿಯವರು ಸರಳ ಉಪಾಯವೊಂದನ್ನು ಕಂಡುಕೊಂಡಿದ್ದಾರೆ. ಬಿತ್ತನೆಗೆ ಹತ್ತು ನಿಮಿಷಗಳ ಮೊದಲು ಸಾಸಿವೆ ಬೀಜಗಳನ್ನು ಮಳೆಯ ನೀರಿನಲ್ಲಿ ನೆನೆಸಿ, ಒಣಗಿಸಿ ಬಿತ್ತನೆ ಮಾಡಿದರೆ ಬೀಜಗಳು ಬೇಗ ಮೊಳಕೆಯೊಡೆಯುತ್ತವೆ ಎಂಬುದು ರಾಬರಿಯವರ ಅನುಭವ. ಇತರೆ ಸಾಂಪ್ರದಾಯಿಕ ಬಿತ್ತನೆ ವಿಧಾನದಿಂದ ಬೀಜ ಮೊಳಕೆಯೊಡೆಯಲು ನಾಲ್ಕರಿಂದ ಐದು ದಿನಗಳು ಬೇಕಾದರೆ ಈ ಸರಳ ವಿಧಾನವನ್ನು ಅನುಸರಿಸುವುದರಿಂದ ಎರಡರಿಂದ ಮೂರು ದಿನಗಳಲ್ಲಿ ಸಂಪೂರ್ಣ ಮೊಳಕೆ ಸಾಧ್ಯ. ಇದಕ್ಕಾಗಿ ಶ್ರೀ ರಾಬರಿಯವರು ಮಳೆಗಾಲದಲ್ಲಿ ಮಳೆನೀರನ್ನು ಸಂಗ್ರಹಿಸಿಡುತ್ತಾರೆ. ಇದನ್ನು ಕಳೆದ ಹತ್ತು ವರ್ಷಗಳಿಂದ ಅನುಸರಿಸುತ್ತಾ ಬಂದಿದ್ದಾರೆ.

ಅರಿಶಿಣದ ಅಧಿಕ ಇಳುವರಿಗೆ ಹಸುವಿನ ಹಸಿ ಸಗಣಿ

ಅರಿಶಿಣ ಗಿಡದ ಕಾಂಡಗಳ ಸುತ್ತ ಅಗೆದು ನಂತರ ಹಸುವಿನ ಹಸಿ ಸಗಣಿಯನ್ನು ಕಾಲುವೆಗೆ, ಕಾಲುವೆಯ ಬದುವಿಗೆ ಮತ್ತು ಗಿಡದ ಕಾಂಡಗಳ ಸುತ್ತು ಹಾಕಿದರೆ ಎರೆಹುಳುಗಳ ಚಟುವಟಿಕೆ ಹೆಚ್ಚಿ ಮಣ್ಣು ಹೆಚ್ಚು ಫಲವತ್ತಾಗುತ್ತದೆ. ಇದರಿಂದ ಅರಿಶಿಣದ ಇಳುವರಿ ಹೆಚ್ಚಾಗುವುದು ಎಂಬುದು ಗುಜರಾತಿನ ಸೂರತ್ ಜಿಲ್ಲೆಯ ಫತೇಸಿಂಗ್ ಚೌದರಿಯವರು ಕಂಡು ಕೊಂಡಿದ್ದಾರೆ. ಹೀಗೆ ಮಾಡುವುದರಿಂದ ಪ್ರತಿ ಹೆಕ್ಟೇರಿನ ಇಳುವರಿಯಲ್ಲಿ ನಾಲ್ಕರಿಂದ ಐದು ಕ್ವಿಂಟಾಲ್ ಅಧಿಕವಾಗುತ್ತದೆಯಂತೆ.

ಶುಂಠಿ ಬೆಳೆಗೆ ಕಾಂಜಿ ಹೂಗಳು

ಶುಂಠಿಯನ್ನು ಬಿತ್ತುವ ಕಾಲಕ್ಕೆ ಕಾಂಜಿ (*Acacia pyrifolia*) ಯ ಹೂಗಳನ್ನು ಕಾಲುವೆಗೆ ಸೇರಿಸಿ ಮುತ್ತುಗ (*Butea monosperma*) ದ ಎಲೆಗಳನ್ನು ನೆಲದಲ್ಲಿ ಹರಡಿದರೆ ಕೀಟ ಮತ್ತು ರೋಗಗಳನ್ನು ಕಡಿಮೆ ಮಾಡುವುದರ ಜೊತೆಗೆ ಮಣ್ಣಿನ ಫಲವತ್ತತೆಯು ವೃದ್ಧಿಯಾಗುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು ಎನ್ನುತ್ತಾರೆ ಗುಜರಾತಿನ ದಾಹೋದ್ ಜಿಲ್ಲೆಯ ಕೇಶವ ಸಿಂಗ್ ಬಾರಿಯಾ. ಇವರಿಗೆ ಈ ಉಪಾಯ ಹೊಳೆದದ್ದಾದರೂ ಹೇಗೆ ಗೊತ್ತೆ? ಗುಜರಾತಿನಲ್ಲಿ ಹೊಲಗಳ ಅಂಚಿನಲ್ಲಿ ಸಾಮಾನ್ಯವಾಗಿ ಕಾಂಜಿ ಗಿಡಗಳನ್ನು ಬೆಳೆಯಲಾಗುತ್ತದೆ. ಹೀಗೆ ಹೂ ಬಿಟ್ಟ ಕಾಂಜಿ ಗಿಡಗಳಿದ್ದ ಹೊಲದ ಅಂಚಿನಲ್ಲಿ ಹೆಚ್ಚಿನ ಇಳುವರಿ ಬಂದಿದ್ದನ್ನು ಕೆಲವು ವರ್ಷಗಳಿಂದ ಶ್ರೀ ಬಾರಿಯಾರವರು ಗಮನಿಸಿದ್ದರು. ಇದರಿಂದ ಪ್ರೇರಿತರಾದ ಇವರು ಈ ಪ್ರಯೋಗಕ್ಕೆ ಇಳಿದು ಯಶಸ್ವಿಯಾಗಿದ್ದಾರೆ.

ಕಳೆ ನಾಶಕವಾಗಿ ಇಂಗು

ಇಂಗಿಗೆ (Asafoetida - *Serula foetida*) ಹಾಲ ಮುಂತಾದ ಅನುಪಯುಕ್ತ ಗಿಡಗಳ ಬೆಳವಣಿಗೆಯನ್ನು ತಡೆಯುವ ಗುಣವಿದೆ ಎನ್ನುತ್ತಾರೆ ಒರಿಸ್ಸಾದ ಧೆಂಕನಾಲ್ ಜಿಲ್ಲೆಯ ದುರ್ಯೋಧನ ಬಿಸ್ವಾಲ್ ಎಂಬ ರೈತರು. ಸಾಮಾನ್ಯವಾಗಿ ಮಳೆಗಾಲದಲ್ಲಿ ಮನೆಯ ಸಂದಿ-ಗೊಂದಿಗಳಲ್ಲಿ ಬೆಳೆಯುವ ಗಿಡಗಳನ್ನು ಬುಡ ಸಮೇತ ಕಿತ್ತು ಅಥವಾ ಕಡಿದು ಹಾಕಿದರೂ ಅವು ಮತ್ತೆ ಮತ್ತೆ ಚಿಗುರಿ ಮನೆಯ ಗೋಡೆಗಳಲ್ಲಿ ಬಿರುಕು ಬರುವಂತೆ ಮಾಡುತ್ತವೆ. ಹೀಗೆ ಮತ್ತೆ ಬೆಳೆಯದಂತೆ ತಡೆಯಲು ಕಡಿಯಲ್ಪಟ್ಟ ಕಾಂಡಗಳ ಮೇಲೆ ಇಂಗಿನ ಪುಡಿಯನ್ನು ಚಿಮುಕಿಸಿದರೆ ಆ ಗಿಡಗಳು ಮತ್ತೆ ಬೆಳೆಯುವುದಿಲ್ಲವಂತೆ. ಆದ್ದರಿಂದ ಇಂಗು ಒಂದು ಕಳೆನಾಶಕವಾಗಬಲ್ಲುದು ಎಂಬುದನ್ನು ಬಿಸ್ವಾಲ್ ಕಂಡುಕೊಂಡಿರುವರು.

ಅವಲಕ್ಕಿಯೊಂದಿಗೆ ಬೀಜಗಳ ಸಂರಕ್ಷಣೆ

ಒರಿಸ್ಸಾದ ಲೋಧಾಣಿ ಎಂಬ ಗ್ರಾಮದ ರೈತರು ಕ್ರಿಮಿ ಕೀಟಗಳಿಂದ ಬೀಜಗಳನ್ನು ಸಂರಕ್ಷಿಸಲು ವಿಶಿಷ್ಟ ವಿಧಾನವೊಂದನ್ನು ಬಳಸುತ್ತಾರೆ. ಬೀಜದೊಂದಿಗೆ ಸ್ವಲ್ಪ ಅವಲಕ್ಕಿಯನ್ನು ಬೆರೆಸಿ ಭತ್ತದ ಹುಲ್ಲಿನ ಬುಟ್ಟಿಯಲ್ಲಿ ಇಡುತ್ತಾರೆ. ಇದರಿಂದ ಕ್ರಿಮಿ ಕೀಟಗಳು ಬೀಜವನ್ನು ತಿನ್ನುವ ಬದಲು ಅವಲಕ್ಕಿಯನ್ನು ತಿನ್ನುತ್ತವೆ. ಆಗ ಬೀಜವನ್ನು ಹೆಚ್ಚು ಭಾದಿಸುವುದಿಲ್ಲ. ಜೊತೆಗೆ ಬುಟ್ಟಿಯೊಳಗಿನ ಬೀಜದ ರಾಶಿಯ ಮೇಲ್ಪದರದ ಮೇಲೆ ಮೂರರಿಂದ ನಾಲ್ಕು ಸಣ್ಣ ಸಣ್ಣ ಕಲ್ಲುಪ್ಪಿನ (ಬಟ್ಟೆಯಲ್ಲಿ ಕಟ್ಟಿದ) ಪಾಕೆಟ್‌ಗಳನ್ನು ಇಡುತ್ತಾರೆ. ಹೀಗೆ ಇಡುವುದರಿಂದ ಉಪ್ಪು ನೀರಿನ ಅಂಶವನ್ನು ಹೀರಿಕೊಳ್ಳುವುದರಿಂದ ಬೀಜಗಳನ್ನು ಹೆಚ್ಚು ಕಾಲ ಸಂರಕ್ಷಿಸಬಹುದು. ಇದು ಒಂದು ಅರ್ಥದಲ್ಲಿ 'ಸಿಕ್ಕು ಹಾಕಿಸುವ ಬೆಳೆ' (Trap Crop) ಬೀಜಗಳಿಗೆ ಬೀಳುವ ಪೀಡೆಯನ್ನು ನಿಯಂತ್ರಿಸುತ್ತದೆ.

ಪಶುಗಳ ಹೇನಿಗೆ ಮಾನವ ಹೇನೇ ಕಂಟಕ !

ಪಶುಗಳಲ್ಲಿ ಹೇನುಗಳ ಭಾದೆ ಸರ್ವೇ ಸಾಮಾನ್ಯ. ಹಾಗೆಂದು ಇದಕ್ಕೆ ಒರಿಸ್ಸಾದ ಬುಡಕಟ್ಟಿನ ರೈತರು ಯಾವ ರಾಸಾಯನಿಕಗಳನ್ನೂ ಬಳಸುವುದಿಲ್ಲ. ಬದಲಿಗೆ



ಮನುಷ್ಯನ ತಲೆಯ ಹೇನುಗಳನ್ನು ಹಿಡಿದು ಹೇನು ಹತ್ತಿದ ಪಶುಗಳ ದೇಹದ ಮೇಲೆ ಬಿಡುತ್ತಾರೆ. ಮನುಷ್ಯರ ತಲೆಯ ಹೇನುಗಳು ಪಶುಗಳ ಹೇನು ಅಥವಾ ಉಣ್ಣಿಗಳ ಮೊಟ್ಟೆ ಮತ್ತು ಮರಿಹುಳುಗಳನ್ನು ತಿನ್ನಬಲ್ಲವಾಗಿವೆ ಎಂಬುದು ಸುಂದರ್‌ಗರ್ ಜಿಲ್ಲೆಯ ವಿಶ್ವನಾಥ ಪ್ರಧಾನ್ ಹೇಳುವ ಮಾತು. ಇದರ ಜೊತೆಗೆ ಪಶುಗಳಿಗೆ 15 ರಿಂದ 20 ದಿನಗಳಿಗೊಮ್ಮೆ ಸ್ನಾನ ಮಾಡಿಸುವುದರಿಂದ ಪಶು ಹೇನುಗಳ ಜೈವಿಕ ನಿಯಂತ್ರಣ ಸಾಧ್ಯ.

ಮೂಲ: ಹನಿ.ಬೀ 14(2), ಜೂನ್ 2003

ದೇಶೀಯ ಅಡಿಕೆ ಯಂತ್ರೋಪಕರಣಗಳು

ಲೇಖಿನ: ಜ್ಯೋತಿ ಆಗುಂಬೆ

ಇತ್ತೀಚೆಗೆ ತುಮಕೂರಿನಲ್ಲಿ ನಡೆದ "ತಳಮಟ್ಟದ ಅನುಶೋಧನೆಗಳನ್ನು ಪೋಷಿಸಿ ಪ್ರೋತ್ಸಾಹಿಸುವ ಕಾರ್ಯಾಗಾರ ಮತ್ತು ವಸ್ತು ಪ್ರದರ್ಶನ"ದಲ್ಲಿ ಅಡಿಕೆ ಬೆಳೆಗಾರರು ಅನುಶೋಧಿಸಿದ ಅಡಿಕೆ ಉಪಕರಣಗಳೇ ಅನೇಕವಿದ್ದವು. ಅವುಗಳಲ್ಲಿ ನರಸಿಂಹ ಭಂಡಾರಿಯವರ ಅಡಿಕೆ ಸುಲಿಯುವ ಯಂತ್ರ, ಮಾಧವ ಡೋಂಗ್ರೆಯವರ ಅಡಿಕೆ ಹೆಕ್ಕುವ ಸಾಧನ, ಸೋಮನಾಥ ಅಯ್ಯರ್‌ರವರ ಅಡಿಕೆ ಸುಲಿಯುವ ಯಂತ್ರ, ಹೀಗೆ ಅಡಿಕೆಗೆ ಸಂಬಂಧಿಸಿದ ಹಲವಾರು ಸಂಶೋಧನೆಗಳಿದ್ದವು. ಇವುಗಳೆಲ್ಲ ಯಾವುದೋ ಸಂಸ್ಥೆಯಿಂದ ಅಥವಾ ತಯಾರಿಕಾ ಘಟಕದಿಂದ ತಯಾರಾಗಿರದೆ ರೈತರು ಸ್ವತ: ತಾವೇ ತಯಾರಿಸಿದ ಸಾಧನಗಳಾಗಿವೆ. ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಸದ್ಯದ ಸಂಕಷ್ಟ ಪರಿಸ್ಥಿತಿಯಲ್ಲಿ ಈ ಅನುಶೋಧನೆಗಳು ರೈತರಿಗೆ ಅನೇಕ ರೀತಿಯಲ್ಲಿ ನೆರವಾಗಬಲ್ಲವು. ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಬೆಳೆ ನಷ್ಟ, ಬೆಲೆ ಕುಸಿತ ಮತ್ತು ಮಾರುಕಟ್ಟೆ ಸಮಸ್ಯೆಗಳ ನಡುವೆ ಅಡಿಕೆಯ ಬೆಳೆ ವೆಚ್ಚ, ನಿರ್ವಹಣಾ ವೆಚ್ಚ ಮತ್ತು ಸಂಸ್ಕರಣಾ ವೆಚ್ಚ ಭರಿಸುವುದು ರೈತರಿಗೆ ಬಹಳ ಕಷ್ಟಸಾಧ್ಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ರೈತರಿಗೆ ಉಪಯೋಗವಾಗುವಂತಹ ಈ ಉಪಕರಣಗಳಿಗೆ ಸೂಕ್ತ ಪ್ರೋತ್ಸಾಹ ಮತ್ತು ಸಹಾಯ ದೊರೆತಲ್ಲಿ ಖಂಡಿತವಾಗಿಯೂ ರೈತರಿಗೆ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಅಡಿಕೆ ಸುಲಿಯುವ ಯಂತ್ರಗಳು ಬಹಳ ಮುಖ್ಯವಾಗಿದ್ದು ಪ್ರದರ್ಶನಕ್ಕೆ ಬಂದಿದ್ದ ಐದು ಯಂತ್ರಗಳ ತುಲನಾತ್ಮಕ ಅವಲೋಕನ ಮುಂದೆ ನೀಡಲಾಗಿದೆ.


ಅಡಿಕೆ ಸುಲಿಯುವ ಯಂತ್ರಗಳು

1. ಭಂಡಾರಿ ಅಡಿಕೆ ಸುಲಿಯುವ ಯಂತ್ರ




ಅಡಿಕೆ ಸಂಸ್ಕರಣೆಯಲ್ಲಿ ಅಡಿಕೆ ಸುಲಿಯುವುದು ಒಂದು ಪ್ರಯಾಸದ ಕೆಲಸ. ಇದಕ್ಕೆ ಯಾವುದೇ ಯಂತ್ರವಾಗಲೀ, ಉಪಕರಣವಾಗಲೀ ಇರಲಿಲ್ಲ. ಅಡಿಕೆ ಸುಲಿಯುವ ಕಾಯಕಕ್ಕೆ ಒಂದು ಸೂಕ್ತ ಸಾಧನದ ಅಗತ್ಯವಿತ್ತು. ಇಂತಹ ಸಂದರ್ಭದಲ್ಲಿ ನರಸಿಂಹ ಭಂಡಾರಿ ಮತ್ತಿತರರ ಅಡಿಕೆ ಸುಲಿಯುವ ಯಂತ್ರಗಳ ಅನ್ವೇಷಣೆ ಮಲೆನಾಡಿನ ಅಡಿಕೆ ಬೆಳೆಗಾರರಿಗೆ ಒಂದು ಮಹತ್ವದ ಕೊಡುಗೆ. ಇದರಿಂದ ಅತಿ ಕಡಿಮೆ ಅವಧಿಯಲ್ಲಿ ಹೆಚ್ಚು ಪ್ರಮಾಣದ ಅಡಿಕೆಯನ್ನು ಸುಲಿಯಬಹುದಾದ್ದರಿಂದ ಇವು ಅಡಿಕೆ ಬೆಳೆಗಾರರ ದಿನಗೂಲಿ ವೆಚ್ಚವನ್ನು ತಗ್ಗಿಸಬಲ್ಲವು. ಕೊಪ್ಪಾದ ನರಸಿಂಹ ಭಂಡಾರಿಯವರ ಪವರ್ ಚಾಲಿತ ಯಂತ್ರದಿಂದ ಗಂಟೆಗೆ 20 ಕೆಜಿ ಸುಲಿದ ಅಡಿಕೆಯನ್ನು ಪಡೆಯಬಹುದು. ಈ ಯಂತ್ರದ ಬೆಲೆ ಸುಮಾರು 30,000 ರೂಪಾಯಿಗಳು. 1.5 ಹೆಚ್.ಪಿ. ಸಾಮರ್ಥ್ಯದ ಈ ಯಂತ್ರದ ವಿವರವನ್ನು ಈ ಹಿಂದೆ 'ಹಿತ್ತಲ ಗಿಡ'ದ ಸಂಪುಟ ಏಳರ ಮೊದಲ ಸಂಚಿಕೆಯಲ್ಲಿ ಕೊಟ್ಟಿದ್ದು ಇದಕ್ಕೆ ಈಗಾಗಲೆ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಯಾಂತ್ರಿಕ ವಿಭಾಗದಲ್ಲಿ ಪ್ರಥಮ ಪ್ರಶಸ್ತಿ ಕೂಡ ದೊರಕಿರುತ್ತದೆ. PRITVI ಸಂಸ್ಥೆಯ ಸಹಾಯದಿಂದ ಭಂಡಾರಿಯವರ ಕೆಲ ಯಂತ್ರಗಳನ್ನು ತಯಾರಿಸಿ ಮುಂದಿನ ಶೋಧಯಾತ್ರೆಯ ಸಂದರ್ಭದಲ್ಲಿ ಬಿಡುಗಡೆ ಮಾಡುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

2. ಅಯ್ಯರ್ ಹಸಿ ಅಡಿಕೆ ಸುಲಿಯುವ ಯಂತ್ರ



ಇದೇ ರೀತಿಯಲ್ಲಿ ಶೃಂಗೇರಿಯ ಸೋಮನಾಥ ಅಯ್ಯರ್‌ರವರ ಅಡಿಕೆ ಸುಲಿಯುವ ಯಂತ್ರವೂ ಕೂಡ ಒಂದು (ಸ್ವಯಂ ಚಾಲಿತ ಯಂತ್ರ). ಬ್ಯಾಟರಿ ಚಾಲಿತ ಈ ಯಂತ್ರವು ಗಂಟೆಗೆ ಒಂದು ಟನ್ ಅಡಿಕೆ ಸುಲಿಯುತ್ತದೆ. ಈ ಯಂತ್ರವು ಹಸಿ ಮತ್ತು ಚೆಟ್ಟಡಿಕೆಗಳನ್ನು ಸುಲಿಯುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಈ ಯಂತ್ರದ ಬೆಲೆಯು ರೂ. 30,000 ದಷ್ಟಾಗಿರುತ್ತದೆ. ಸೋಮನಾಥ ಅಯ್ಯರ್‌ರವರು ಈ ಯಂತ್ರವನ್ನು ಏಳು ಹಂತಗಳಲ್ಲಿ ತಯಾರಿಸಿದ್ದು ಒಂದು ಯಂತ್ರವು ಸುಮಾರು 5 ರಿಂದ 10 ಎಕರೆ ಅಡಿಕೆ ತೋಟಕ್ಕೆ ಸಾಕಾಗುತ್ತದೆ.

3. ಹೆಗಡೆ ಹಸಿ ಅಡಿಕೆ ಸುಲಿಯುವ ಯಂತ್ರ



ಶಿರಸಿ ಜಿಲ್ಲೆಯ ಉಮ್ಮಚಗಿ ಅನಂತ ಕೃಷ್ಣ ಹೆಗಡೆಯವರ ಅಡಿಕೆ ಸುಲಿಯುವ ಯಂತ್ರವು ಎಳೆಯ ಅಡಿಕೆಯನ್ನು (ಹಸಿ) ಸುಲಿಯಲು ಬಹಳ ಉಪಯುಕ್ತವಾಗಿದೆ. ಭಂಡಾರಿ ಮತ್ತು ಅಯ್ಯರ್ ಯಂತ್ರಗಳನ್ನು ಒಂದೆಡೆಯಿಂದ ಮತ್ತೊಂದೆಡೆ ಸಾಗಿಸಬಹುದಾದರೆ ಹೆಗ್ಡೆಯವರದ್ದು ಒಂದೆಡೆ ಸ್ಥಿರವಾಗಿ ಸ್ಥಾಪಿಸುವಂತಹದ್ದಾಗಿರುತ್ತದೆ. ಇದು ಬಹಳ ಶೀಘ್ರ ಗತಿಯಲ್ಲಿ ಅಡಿಕೆಯನ್ನು ಸುಲಿಯುತ್ತದೆ. ಈ ಯಂತ್ರದ ಬೆಲೆ ರೂ. 25,000 ದಷ್ಟಾಗಿರುತ್ತದೆ.

4. 'ತೋಟಿಗ ಮಿತ್ರ' ಹಸಿ ಅಡಿಕೆ ಸುಲಿಯುವ ಯಂತ್ರ



ಸಾಗರದ ಮಂಜಪ್ಪನವರು ಅನುಶೋಧಿಸಿರುವ ಹಸಿ ಅಡಿಕೆ ಸುಲಿಯುವ ಈ ಯಂತ್ರವನ್ನು ವಿದ್ಯುತ್ ಚಾಲಿತವಾಗಿಯೂ ಮತ್ತು ಕೈ ಚಾಲಿತವಾಗಿಯೂ ಉಪಯೋಗಿಸಬಹುದು. ವೃದ್ಧಾಪ್ಯ ಮತ್ತು ಹಣಕಾಸಿನ ಅಡಚಣೆಯ ಕಾರಣದಿಂದ ಶ್ರೀ ಮಂಜಪ್ಪನವರು ಇದನ್ನು ಅಭಿವೃದ್ಧಿಪಡಿಸಿ, ಬೆಳೆಗಾರರ ಉಪಯೋಗಕ್ಕೆ ತಕ್ಕಂತೆ ಬಿಡುಗಡೆಗೊಳಿಸಲೆಂದು ಗ್ರಾಮಾಂತರ ಸಮುದಾಯ ವಿಜ್ಞಾನ ಕೇಂದ್ರ, ಶೆಡ್ತಿಕೆರೆ, ಈ ಸಂಸ್ಥೆಗೆ ಇದರ ಹಕ್ಕುಗಳನ್ನು ಲಿಖಿತ ಕರಾರಿನ ಮೂಲಕ ಬಿಟ್ಟುಕೊಟ್ಟಿದ್ದಾರೆ.

5. ಅಡಿಗ ಗೋಟಡಿಕೆ ಸುಲಿಯುವ ಉಪಕರಣ



ಇದೇ ರೀತಿಯಾಗಿ ಗೋಟಡಿಕೆಯನ್ನು ಅಥವಾ ಬಲಿತ ಅಡಿಕೆಯನ್ನು ಸುಲಿಯಲು ಹೇರೂರಿನ ಕೃಷಿಕರಾದ ಗಿರೀಶ್ ಅಡಿಗರವರು ಅತಿ ಚಿಕ್ಕದಾದ ಮತ್ತು ಸರಳವಾದ ಉಪಕರಣವನ್ನು ತಯಾರಿಸಿದ್ದಾರೆ. ಬಲಿತ ಅಡಿಕೆಯನ್ನು ಸುಲಿಯುವುದು ಬಹಳ ಶ್ರಮದಾಯಕ ಮತ್ತು ಪ್ರಯಾಸದ ಕೆಲಸ. ಗಿರೀಶ್ ಅಡಿಗರವರ ಈ ಉಪಕರಣವು ಶ್ರಮವನ್ನು ಕಡಿಮೆ ಮಾಡುವುದಲ್ಲದೆ ಬೆಲೆಯೂ ಕಡಿಮೆಯಾಗಿದ್ದು ಸಣ್ಣ ಮತ್ತು ಅತಿ ಸಣ್ಣ ರೈತರ ಕೈಗೆಟಕುವಂತಿದೆ. ಕೈ ಚಾಲಿತ ಈ ಉಪಕರಣದ ಬೆಲೆ ಸುಮಾರು 35 ರಿಂದ 40 ರೂಪಾಯಿಗಳು ಮಾತ್ರ.

ಅಡಿಕೆ ಹೆಕ್ಕುವ ಸಾಧನಗಳು

ಡೋಂಗ್ರೆ ಅಡಿಕೆ ಹೆಕ್ಕುವ ಸಾಧನ



ಉತ್ಸಾಹೀ ಕೃಷಿಕ ಮಾಧವ ಡೋಂಗ್ರೆಯವರು ತಯಾರಿಸಿರುವ ಅಡಿಕೆ ಹೆಕ್ಕುವ ಉಪಕರಣ ಅಡಿಕೆ ಬೆಳೆಗಾರರ ಬಹಳಷ್ಟು ದೈಹಿಕ ಶ್ರಮವನ್ನು ಕಡಿಮೆ ಮಾಡುತ್ತದೆ. ಇದು ಅಡಿಕೆ ತೋಟಗಳಲ್ಲಿ ದಿನವೂ ಉದುರುವ ಅಡಿಕೆ ಕಾಯಿಗಳನ್ನು ಹೆಚ್ಚು ಶ್ರಮವಿಲ್ಲದೆ ಸಂಗ್ರಹಿಸುವುದಕ್ಕೆ / ಹೆಕ್ಕುವುದಕ್ಕೆ ಬಹಳ ಉಪಯುಕ್ತವಾಗಿದೆ. ಈ ಉಪಕರಣವನ್ನು ಉಪಯೋಗಿಸಿಕೊಂಡು ವಯಸ್ಸಾದವರೂ ಸಹ ಬೆನ್ನು ಬಾಗಿಸದೆ ಅಡಿಕೆಯನ್ನು ಹೆಕ್ಕಬಹುದು. ಇದು ಬಹಳ ಸರಳ ಸಾಧನವಾಗಿದ್ದು, ಎಲ್ಲರಿಗೂ ಅನುಕೂಲಕರ ರೀತಿಯಲ್ಲಿ ತಯಾರಾಗಿದೆ. ಈ ಉಪಕರಣದಲ್ಲಿ ಎರಡು ನಾಲಿಗೆಯಂತಹ ರಚನೆಗಳಿದ್ದು ಇವುಗಳ ನಿಯಂತ್ರಣದಿಂದ ಅಡಿಕೆಯನ್ನು ಸುಲಭವಾಗಿ ಹೆಕ್ಕಬಹುದು.

ಆಳ್ವ ಅಡಿಕೆ ಹೆಕ್ಕುವ ಸಾಧನ



ಇದೇ ರೀತಿಯಾಗಿ ಅಡಿಕೆ ಹೆಕ್ಕುವ ಇನ್ನೊಂದು ಸಾಧನವನ್ನು ವಿವೇಕ್ ಆಳ್ವರವರು ಅನುಶೋಧಿಸಿದ್ದಾರೆ. ಎರಡು ಪಿ.ವಿ.ಸಿ. ಪೈಪ್‌ಗಳನ್ನು ಉಪಯೋಗಿಸಿಕೊಂಡು ತಯಾರಾದ ಇವರ ಅಡಿಕೆ ಹೆಕ್ಕುವ ಉಪಕರಣ ಅತ್ಯಂತ ಸರಳವೂ, ಉಪಯೋಗಕಾರಿಯೂ, ಮಹತ್ವಪೂರ್ಣವೂ ಆಗಿರುತ್ತದೆ. ಒಂದು ಕಡೆಯಲ್ಲಿ ಹೆಕ್ಕಿದ ಅಡಿಕೆಯನ್ನು ಇನ್ನೊಂದು ಕಡೆಯಿಂದ ಸಂಗ್ರಹಿಸಬಹುದು. ಸಾಮಾನ್ಯವಾಗಿ ಅರ್ಧ ಎಕರೆ ಪ್ರದೇಶದಲ್ಲಿ, ಅಡಿಕೆ ಹೆಕ್ಕಲು ಸುಮಾರು ಒಂದು ಗಂಟೆಯಷ್ಟು ಸಮಯ ಬೇಕಾಗುತ್ತದೆ. ಸುಮಾರು 40 ನಿಮಿಷಗಳಲ್ಲಿಯೇ ಶ್ರಮವಿಲ್ಲದೆ ಒಂದು ಎಕರೆ ಅಡಿಕೆ ತೋಟದಲ್ಲಿ ಉದುರಿದ ಅಡಿಕೆ ಕಾಯಿಯನ್ನು ಈ ಸಾಧನದ ಮೂಲಕ ಹೆಕ್ಕಬಹುದು. ಈ ಎರಡೂ ಹೆಕ್ಕುವ ಸಾಧನಗಳ ಬೆಲೆ ರೂ. 75 ರಿಂದ 100 ಗಳಾಗಬಹುದಾಗಿದೆ.

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ, ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

- ಸಂಪಾದಕ

ಬಂಗಾರದಂತಹ ಭತ್ತದ ತಳಿಗಳ ಸಂರಕ್ಷಕ ಬಂಗಾಡಿ ಕಿಲ್ಲೂರು ದೇವರಾಯರು

ಆಧುನಿಕ ಮತ್ತು ರಾಸಾಯನಿಕ ಕೃಷಿಯ ಭ್ರಮೆಯ ಪ್ರಭಾವಕ್ಕೆ ಸಿಕ್ಕಿ ಅಳಿದುಳಿದ ಕೆಲವೇ ಕೆಲವು ತಳಿಗಳನ್ನು ನಾವು ಅಲ್ಲಲ್ಲೇ ಅಪರೂಪವೆಂಬಂತೆ ನೋಡಬಹುದು. ಹೀಗೆ ವಿನಾಶದ ಅಂಚಿನಲ್ಲಿದ್ದ ಅಪರೂಪದ ಭತ್ತದ ತಳಿಗಳನ್ನು ವಿವಿಧ ಮೂಲಗಳಿಂದ ಕಲೆ ಹಾಕಿ ಒಂದೆಡೆ ಬೆಳೆದು ಸಂರಕ್ಷಿಸುತ್ತಿರುವ ಹೆಮ್ಮೆಯ ಸಾಧಕರೊಬ್ಬರು ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು, ಮಿತ್ತಬಾಗಿಲು ಗ್ರಾಮದಲ್ಲಿದ್ದಾರೆ. ಅವರೇ ಬಂಗಾಡಿ ಕಿಲ್ಲೂರು ದೇವರಾಯರು.

ಇದುವರೆಗೆ ಸುಮಾರು 45 ವಿಶಿಷ್ಟ ಭತ್ತದ ತಳಿಗಳನ್ನು ಸುಮಾರು ಹತ್ತು ಹದಿನೈದು ವರ್ಷಗಳಿಂದ ಸಂರಕ್ಷಿಸಿ ಬೆಳೆಸುತ್ತಿರುವ ದೇವರಾಯರು ಒಬ್ಬ ಸರಳ, ಸ್ವಾವಲಂಬಿ, ಅಪ್ಪಟ ಸಾವಯವ ಕೃಷಿಕ. ಇವರು ಸಂರಕ್ಷಿಸಿರುವ ತಳಿಗಳನ್ನು ಇದುವರೆಗಿನ ಅನುಭವದ ಆಧಾರದ ಮೇಲೆ ಮೂರು ವಿಧಗಳಾಗಿ ವಿಂಗಡಿಸಿದ್ದಾರೆ. ಮೊದಲನೆಯದು ಮುಂಗಾರು (ಮಳೆಗಾಲದ) ತಳಿಗಳು, ಎರಡನೆಯದು ಸುಗ್ಗಿ (ಬೇಸಿಗೆ) ತಳಿಗಳು ಮತ್ತು ಮೂರನೆಯದು ಮುಂಗಾರು-ಸುಗ್ಗಿ ಎರಡೂ ಹಂಗಾಮಿನಲ್ಲೂ ಬೆಳೆಯಬಹುದಾದ ತಳಿಗಳು. ಜೊತೆಗೆ ಅನ್ನ, ಅವಲಕ್ಕಿ, ಕುಚಲಕ್ಕಿ, ಪಾಯಸ, ಕೇಸರಿಬಾತ್ ಮುಂತಾದ ಉದ್ದೇಶಗಳಿಗಾಗಿಯೇ ವಿಶಿಷ್ಟ ತಳಿಗಳಿವೆ. ಪ್ರತಿಯೊಂದು ತಳಿಗೂ ಅದರದೇ ಆದ ವಿಶಿಷ್ಟ ಗುಣ ಲಕ್ಷಣಗಳಿವೆ. ಗಂಧಸಾಲೆ, ಕಳಾಮೆ, ಜೀರ ಸಾಲ, ಬಾಸುಮತಿ, ಗುಲ್ವಾಡಿ ಸಣ್ಣ ಮತ್ತು ಜೀರಿಗೆ ಸಣ್ಣ ತಳಿಗಳು ಉತ್ತಮ ಸುವಾಸನೆಯಿಂದ ಕೂಡಿದ್ದರೆ ರಾಜ ಕಾಯಮೆ, ಮಸ್ಸೂರಿ, ಗಂಧಸಾಲೆ, ಮಸ್ಕತ್ತಿ ಜೀರಸಾಲ ಮುಂತಾದವನ್ನು ಹೆಚ್ಚು ಕಾಲ ಸಂರಕ್ಷಿಸಿಡಬಹುದು. ಗಂಧಸಾಲೆ, ಗಿಡ್ಡ ಭತ್ತ ಮತ್ತು ಜೀರಿಗೆ ಸಾಲ ತಳಿಗಳು ನೆಲಕ್ಕೆ ಬೀಳುವುದಿಲ್ಲ. ಅಲ್ಸಂಡೆ, ಹಳ್ಳಿಂಗ, ಕಾವಳ ಕಣ್ಣು, ಕಾಯಮೆ, ಪೀಟ ಸಾಲ, ಕೊಳಕೆ ದೊಡ್ರ ಮತ್ತು ಕೆ.ಕೆ.ಪಿ. ತಳಿಗಳು ಕುಚಲಕ್ಕಿ ಮಾಡಲು ಹೆಚ್ಚು ಸೂಕ್ತ. ಮೊರಡ್ಡ, ಕೊಳಕೆ ದೊಡ್ರ ಮತ್ತು ಗುಲ್ವಾಡಿ ಸಣ್ಣ ತಳಿಗಳು ಕಡಿಮೆ ಅವಧಿಯ ತಳಿಗಳಾಗಿದ್ದರೆ ಬಹುತೇಕ ಎಲ್ಲಾ ದೇಶೀಯ ತಳಿಗಳು ರೋಗ ಮತ್ತು ಕೀಟ ನಿರೋಧಕ ಶಕ್ತಿಯನ್ನು ಹೊಂದಿವೆ. ಅತಿಕರ ತಳಿಯ ಅಕ್ಕಿಯನ್ನು ಅರೆದು ಪುಡಿಮಾಡಿ ಕಲಸಿ, ಕಾಯಿಸಿ ಕುಡಿದರೆ ವಾಂತಿ ಬೇಧಿಗೆ ಔಷಧಿಯಾಗಬಲ್ಲದು.

ಈಗ ಅರವತ್ತೊಂದರ ಹರಯದಲ್ಲಿರುವ, ಪಿ.ಯು.ಸಿ. ಕಲಿತ ನಂತರ ವಾಯುಯಾನ ದಳದಲ್ಲಿ ಸಿಕ್ಕ ಉದ್ಯೋಗವಕಾಶವನ್ನು ಬಿಟ್ಟು ಕೃಷಿಗಿಳಿದ ರಾಯರು ಈವರೆಗೂ ರಾಸಾಯನಿಕ ಗೊಬ್ಬರವನ್ನಾಗಲಿ, ಕೀಟನಾಶಕವನ್ನಾಗಲೀ ಕಿಂಚಿತ್ತೂ ಬಳಸಿಲ್ಲ. ಹಸಿರೆಲೆ ಗೊಬ್ಬರ, ಕೊಟ್ಟಿಗೆ ಗೊಬ್ಬರ, ಭತ್ತದ ಹೊಟ್ಟಿನ ಬೂದಿಗಳನ್ನೇ ಬಳಸಿ ಪ್ರತಿ ಎಕರೆಗೆ ಸರಾಸರಿ ಹದಿನೈದು ಕ್ವಿಂಟಾಲ್ ಭತ್ತ ಬೆಳೆಯುತ್ತಿದ್ದಾರೆ (ಅದೂ ಕರಾವಳಿಯಲ್ಲಿ). ಇವರ ಸಾಧನೆಗಳನ್ನು ಗುರುತಿಸಿದ ಕುರುವಳ್ಳಿ ಪುರುಷೋತ್ತಮ ರಾವ್ ಪ್ರತಿಷ್ಠಾನವು 'ಪುರುಷೋತ್ತಮ ಸನ್ಮಾನ' ವನ್ನು ನೀಡಿ ಗೌರವಿಸಿದೆ. ರಾಯರು ಈ ವರ್ಷ ಮುಂಗಾರಿನಲ್ಲಿ ಸಂರಕ್ಷಿಸಿದ ಭತ್ತದ ತಳಿಗಳು ಹಾಗೇ ಅವುಗಳ ಕಾಳು ಮತ್ತು ಹುಲ್ಲಿನ ಇಳುವರಿಗಳ ವಿವರ ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

ಕ್ರಮ ಸಂಖ್ಯೆ	ತಳಿಗಳು	ಅವಧಿ (ದಿನಗಳಲ್ಲಿ)	ವಿಶೇಷ ಗುಣಗಳು	ಇಳುವರಿ (ಕ್ವಿಂಟಾಲ್ ಎಕರೆಗೆ)	
				ಬತ್ತ	ಹುಲ್ಲು
1.	ರಾಜ ಕಾಯಮೆ	180	ಹೆಚ್ಚು ತೂಕ, ಬಾಳಿಕೆ, ಉರುಟು ಅಕ್ಕಿ, ಪೀಡೆ ನಿರೋಧಕ ಶಕ್ತಿ ಇದೆ	11.22	19.60
2.	ಮಸ್ಸೂರಿ	175	ಹೆಚ್ಚು ಬಾಳಿಕೆ, ಹೆಚ್ಚು ಇಳುವರಿ, ಬಿಳಿ ಅಕ್ಕಿ	15.13	18.39
3.	ಗಂಧಸಾಲೆ	185	ಪರಿಮಳಯುಕ್ತ, ಹೆಚ್ಚು ಬಾಳಿಕೆ, ಬೆಳೆ ಬೀಳುವುದಿಲ್ಲ	14.64	33.25
4.	ಅಲ್ಸಂಡೆ	150	ಕೆಂಪು ಕಾಂಡ, ಅತಿಯಾಗಿ ಬೀಳುತ್ತದೆ, ಕುಚಲಕ್ಕಿಗೆ ಸೂಕ್ತ	16.13	21.87
5.	ಗಿಡ್ಡ ಭತ್ತ	120	ಬೆಳೆ ಬೀಳುವುದಿಲ್ಲ, ಚಿಕ್ಕ ತಳಿ	16.77	16.06
6.	ಕಳಮೆ	120	ಪರಿಮಳಯುಕ್ತ ಕೆಂಪು ಅಕ್ಕಿ	14.50	19.67
7.	ಮೀಸೆ ಭತ್ತ	115	ಬತ್ತಕ್ಕೆ ಉದ್ದನೆಯ ಮೀಸೆ, ಕೆಂಪು ಅಕ್ಕಿ	16.08	22.72
8.	ಮಸ್ಕತ್ತಿ	115	ಹೆಚ್ಚು ಬಾಳಿಕೆಬರುವ ಅಕ್ಕಿ	18.80	18.80
9.	ಜೀರ ಸಾಲ	170	ಪರಿಮಳಯುಕ್ತ, ಬೆಳೆ ಬೀಳುವುದಿಲ್ಲ, ಹೆಚ್ಚು ಬಾಳಿಕೆ	14.00	33.25
10.	ಅಜಿಪ್ಪ	130	ದೊಡ್ಡ ಭತ್ತ, ಎಲ್ಲಾಕಾಲದ ಬೆಳೆ	06.60	21.40
11.	ಮೊರಡ್ಡ	130	ಕಡಿಮೆ ಅವಧಿ ಬಿತ್ತನೆಗೆ ಸೂಕ್ತ, ದೊಡ್ಡ ಕೆಂಪಕ್ಕಿ	10.5	18.31
12.	ಬಾಸುಮತಿ	125	ಪರಿಮಳಯುಕ್ತ, ಪಲಾವ್‌ಗೆ ಮತ್ತು ಪಾಯಸಕ್ಕೆ ಹೆಚ್ಚು ಸೂಕ್ತ	17.68	17.94
13.	ಹಳ್ಳಿಂಗ	125	ಕೆಂಪು ಅಕ್ಕಿ, ಕುಚಲಕ್ಕಿಗೆ ಸೂಕ್ತ	10.96	18.68
14.	ಅದೇನ್ ಕೇಳ್ತೆ	135	ಬೆಣತಿಗೆ ಅಕ್ಕಿಗೆ ಸೂಕ್ತ, ಇಡೀ ಪೈರು ಕೆಂಪಗಿರುತ್ತೆ	16.56	108.58
15.	ಬಿಳಿ ನೆಲ್ಲು	125	ಬಿಳಿ ಕಾಂಡ ಹೊಂದಿರುವ ಸಸಿ	10.34	16.68
16.	ಕಾವಳ ಕಣ್ಣು	120	ಕುಚಲಕ್ಕಿಗೆ ಸೂಕ್ತ ಭತ್ತದ ತುದಿಯಲ್ಲಿ ಕೆಂಪು ಚುಕ್ಕಿ	17.76	18.36
17.	ಕಾಯಮೆ	115	ಕುಚಲಕ್ಕಿಗೆ ಸೂಕ್ತ, ಭತ್ತದ ತುದಿಯಲ್ಲಿ ಕೆಂಪು ಚುಕ್ಕಿ	19.16	18.23
18.	ಪೀಟ ಸಾಲ	170	ಕೆಂಪು ಅಕ್ಕಿ, ಕುಚಲಕ್ಕಿಗೆ ಸೂಕ್ತ	14.64	33.25
19.	ಕೊಳಕೆ ದೊಡ್ರ	120	ಕುಚಲಕ್ಕಿಗೆ ಸೂಕ್ತ, ಕಡಿಮೆ ಅವಧಿ	11.02	22.72
20.	ಗುಲ್ವಾಡಿ ಸಣ್ಣ	115	ಪರಿಮಳಯುಕ್ತ, ಕಡಿಮೆ ಅವಧಿ	12.38	14.32
21.	ಜೀರಿಗೆ ಸಣ್ಣ	120	ಪರಿಮಳಯುಕ್ತ ಅಕ್ಕಿ	14.00	15.00

ಕೃಷಿ ಮತ್ತು ಪರಿಸರ

ಇತ್ತೀಚಿನ ದಶಕಗಳಲ್ಲಿ ವಿಪರೀತವಾಗಿ ಉಂಟಾದ ಜನಸಂಖ್ಯಾ ಸ್ಫೋಟ, ಕೈಗಾರಿಕಾ ಕ್ರಾಂತಿ, ಹಸಿರು ಕ್ರಾಂತಿ, ಪರಮಾಣು ಕ್ರಾಂತಿ ಮುಂತಾದ ಕ್ಷಿಪ್ರ ಪ್ರಗತಿಯ ಕಾರಣ ಪ್ರಕೃತಿಯ ಪ್ರಧಾನ ಅಂಶಗಳಾದ ಭೂಮಿ, ನೀರು, ಗಾಳಿ, ಬೆಳಕು ಎಲ್ಲವುಗಳ ಮೇಲೆ ಭಯಾನಕ ದಾಳಿ ಉಂಟಾಗಿದೆ. ಕುಸಿದ ಕಾಡು, ವನ್ಯ ಜೀವಿ ಸಂಪತ್ತು ಕಲುಷಿತ ಭೂಮಿ, ನದಿ ಜಲಾಶಯಗಳು, ವಿಷಯುಕ್ತ ಗಾಳಿ, ಹದ ತಪ್ಪಿದ ಸೂರ್ಯನ ಬೆಳಕು ಸಂಕಷ್ಟದ ಮಟ್ಟ ಮುಟ್ಟಿವೆ. ಪರಿಸ್ಥಿತಿಯನ್ನು ಗಂಭೀರವಾಗಿ ಗಮನಿಸಿದಾಗ ಮನುಜಕುಲ ಅಳಿವಿನ ಅಂಚನ್ನು ತಲುಪಿದೆಯೇ ಎಂಬ ತಳಮಳ ಸಹಜ. ಈ ಸವಾಲನ್ನು ಎದುರಿಸಲು ಮೊದಲ ಹೆಜ್ಜೆಯಾಗಿ ಅವುಗಳನ್ನು ಕುರಿತ ಪ್ರಜ್ಞಾಪೂರ್ವಕ ಅರಿವು ಹೊಂದಿರುವುದು ಅವಶ್ಯಕ. ಈ ದಿಸೆಯಲ್ಲಿ ಪರಿಸರ ಪ್ರಜ್ಞಾ ಪ್ರತಿಷ್ಠಾನದ ಅಧ್ಯಕ್ಷರಾದ ಬಿ.ವಿ. ವೆಂಕಟರಾವ್ ಅವರು ಸಂಪಾದಿಸಿರುವ "ಕೃಷಿ ಮತ್ತು ಪರಿಸರ" ಎಂಬ ಲೇಖನಗಳ ಸಂಕಲನ ಉಪಯುಕ್ತವಾಗಬಲ್ಲದು.

ಈ ಸಂಕಲನವು ನಾಡಿನ ಪ್ರಮುಖ ಪತ್ರಿಕೆಗಳಾದ ಪ್ರಜಾವಾಣಿ, ಪ್ರಬುದ್ಧ ಕರ್ನಾಟಕ, ವಿಜ್ಞಾನ ಕರ್ನಾಟಕ, ಸಾಧನೆ, ಮೈಸೂರು ವ್ಯವಸಾಯ ಪತ್ರಿಕೆ, ಮೈಸೂರು ವ್ಯವಸಾಯ ಪಂಚಾಂಗ, ವ್ಯವಸಾಯ ಕಾಲೇಜು ಪತ್ರಿಕೆ ಮತ್ತು 'ಹೊಸತು' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟಗೊಂಡ ಹದಿನೆಂಟು ಚಿಂತನಶೀಲ ಲೇಖನಗಳನ್ನೊಳಗೊಂಡಿದೆ. ವಿಶೇಷವಾಗಿ ಕೃಷಿ ಚಟುವಟಿಕೆ - ಪರಿಸರ ಕುರಿತ ಚರ್ಚೆಯಲ್ಲಿ ಭೂಮಿ-ಜನ-ಪರಿಸರ, ನೀರು ಮತ್ತು ಮಣ್ಣಿನ ಸಂರಕ್ಷಣೆ, ಭೂಫಲವತ್ತತೆ ಮತ್ತು ಗೊಬ್ಬರಗಳ ಬಳಕೆ, ಸಾರಜನಕಯುಕ್ತ ಗೊಬ್ಬರವಾಗಿ ದ್ರವ ಅಮೋನಿಯ ಬಳಕೆ, ತುಂಗಭದ್ರಾ ಆಯಕಟ್ಟಿನಲ್ಲಿ ನೀರಾವರಿ ಬೇಸಾಯದ ಕೆಲವು ಸಮಸ್ಯೆಗಳು, ಮಳೆ ಬೇಸಾಯದಲ್ಲಿ ಪ್ರಗತಿ ಸಾಧ್ಯವೆ?, ಪರಿಸರ ವ್ಯವಸ್ಥೆಯಾಗಿ ಭಾರತದ ಮಳೆ ಆಧಾರಿತ ಕೃಷಿ, ರಾಷ್ಟ್ರೀಯ ಅರಣ್ಯ ನೀತಿ, ಕೃಷಿರಂಗಕ್ಕೆ ಪುನಶ್ಚೇತನ, ನಮಗೆ ಎಂಥ ಕೃಷಿ ನೀತಿ ಬೇಕು? ಮುಂತಾದ ವಿಚಾರಗಳು ಮಂಥನಕ್ಕೊಳಪಟ್ಟಿವೆ. ಈ ಲೇಖನಗಳು ಬಿ.ವಿ. ವೆಂಕಟರಾವ್ ಜೊತೆಗೆ ಕರ್ನಾಟಕ ಸರ್ಕಾರದ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಪ್ರೊ. ಬಿ.ಕೆ. ಚಂದ್ರಶೇಖರ್, ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ಮಾಜಿ ಕುಲಪತಿಗಳಾದ ಡಾ. ಆರ್. ದ್ವಾರಕೀನಾಥ್, ಗುಲ್ಬರ್ಗಾ ವಿಶ್ವ ವಿದ್ಯಾನಿಲಯದ ಮಾಜಿ ಕುಲಪತಿಗಳಾದ ಡಾ. ನಾಡಕರ್ಣಿ, ಅರಣ್ಯತಜ್ಞರಾದ ಶ್ರೀ ಅಜ್ಜಂಪುರ ಕೃಷ್ಣಸ್ವಾಮಿ, ತುಮಕೂರಿನ ಕಾಳಿದಾಸ ಕಾಲೇಜಿನ ಪ್ರಿನ್ಸಿಪಾಲರಾದ ಡಾ. ಯತಿರಾಜು ಅವರುಗಳಿಂದ ರಚಿಸಲ್ಪಟ್ಟಿದ್ದು ಒಂದಕ್ಕೊಂದು ಪೂರಕವಾಗಿವೆ. ನವ ಕರ್ನಾಟಕ ಪ್ರಕಾಶನವು ಈ ಪುಸ್ತಕವನ್ನು ಪ್ರಕಟಿಸಿದೆ.

ಕೃಷಿ ಗಾದೆಗಳು

ಸಹಸ್ರಾರು ವರ್ಷಗಳ ಚರಿತ್ರೆಯಿರುವ ಕೃಷಿಯ ಜೊತೆಗೇ ಹಲವಾರು ಕೃಷಿ ಸಂಬಂಧಿ ನಂಬಿಕೆಗಳು ಹುಟ್ಟಿಕೊಂಡು ಬೆಳೆದು ಬಂದಿವೆ. ಈ ನಂಬಿಕೆಗಳೇ ಕ್ರಮೇಣ ಆಡುಮಾತಿನ ಗಾದೆಗಳಾಗಿ ಪ್ರಚಲಿತಕ್ಕೆ ಬಂದಿವೆ. ಸರಳವೂ ಅರ್ಥಪೂರ್ಣವೂ ಆದ ಅಪಾರ ಗಾದೆಗಳು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಜನರ ನಾಲಿಗೆಯ ಮೇಲೆ ನಲಿದಾಡುತ್ತವೆ. ಜನರ ಬಾಯಿಂದ ಬಾಯಿಗೆ, ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತಾ ಬಂದ ಈ ಗಾದೆಗಳು ಮಾನವನ, ವಿಶೇಷವಾಗಿ ಕೃಷಿಕನ ಜೀವನದ ಪ್ರತಿಯೊಂದು ಸಂದರ್ಭ, ಸನ್ನಿವೇಶ, ಆಚಾರ, ವಿಚಾರಗಳಿಗೆ ಸಂಬಂಧಪಟ್ಟವುಗಳಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬಂತೆ ಗಾದೆ-ಒಗಟುಗಳಲ್ಲಿನ ಸೊಗಡು, ಸತ್ಯ ಎಲ್ಲಾ ಕಾಲಕ್ಕೂ ಇರುವಂತಹದ್ದು.

ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗದ ಪ್ರಾಧ್ಯಾಪಕರುಗಳಾದ ಡಾ. ಎಂ.ಎ. ನಾರಾಯಣ ರೆಡ್ಡಿ ಮತ್ತು ಡಾ. ಪಿ. ನಾರಾಯಣ ಸ್ವಾಮಿ ಇವರುಗಳು ಸಂಪಾದಿಸಿ, ನವಕರ್ನಾಟಕ ಪ್ರಕಾಶನ ಪ್ರಕಟಿಸಿರುವ "ಕೃಷಿ ಗಾದೆಗಳು" ಪುಸ್ತಕವು ಅತ್ಯಂತ ಮಹತ್ವದ್ದು. ಕೃಷಿ ಸಂಬಂಧಿತ ಸುಮಾರು ಐದುನೂರು ಗಾದೆಗಳು ಮತ್ತು ಅವುಗಳ ವಿವರಣೆಯನ್ನು ಈ ಪುಸ್ತಕ ಒಳಗೊಂಡಿದೆ.

ಮೇಲಿನ ಎರಡು ಪುಸ್ತಕಗಳಿಗೆ ಸಂಪರ್ಕಿಸಬಹುದಾದ ವಿಳಾಸ: ನವಕರ್ನಾಟಕ ಪ್ರಕಾಶನ, ಎಂಬೆಸ್ಸಿ ಸೆಂಟರ್, ಕ್ರೀಸೆಂಟ್ ರಸ್ತೆ, ಬೆಂಗಳೂರು-560 001

***ಕೃತಿ ಪರಿಚಯ:** ಮು.ಲ. ಕೆಂಪೇಗೌಡ ನಾಗಮಂಗಲ*

ಪ್ರತಿಕ್ರಿಯೆ

ತಾವು ಕಳಿಸಿದ 'ಹಿತ್ತಲಗಿಡ' ಚಾತುರ್ಮಾಸಿಕ ಪತ್ರಿಕೆ ನೋಡಿ ತುಂಬಾ ಸಂತೋಷವಾಯಿತು. ಇಂಥದೊಂದು ಪತ್ರಿಕೆಯಿರುವ ವಿಷಯವೇ ನನಗೆ ಗೊತ್ತಿರಲಿಲ್ಲ. ಹೊಸ ಹೊಸ ವಿಷಯಗಳ ಅನ್ವೇಷಣೆಯಲ್ಲಿ, ಆವಿಷ್ಕಾರದಲ್ಲಿ ತೊಡಗಿ ತಮ್ಮ ಬೌದ್ಧಿಕ -ಸನಧಿನ ಹಕ್ಕುಗಳನ್ನು ರಕ್ಷಿಸಿ ಅನುಶೋಧನೆಗಳನ್ನು ದಾಖಲಿಸುವಲ್ಲಿ ರೈತರಿಗೆ, ವಿಜ್ಞಾನಿಗಳಿಗೆ, ವಿದ್ಯಾರ್ಥಿಗಳಿಗೆ ಬಹಳ ಸಹಾಯಕವೂ ಉಪಯುಕ್ತವೂ ಆಗಿದೆ.

ವಿ.ಎಸ್. ಶರ್ಮ, ಗೋಕರ್ಣ, ಉತ್ತರ ಕನ್ನಡ

ಕಡಲೆಕಾಯಿ ಪರಿಸೆ

ಪ್ರತಿ ವರ್ಷದಂತೆ ಈ ವರ್ಷವೂ ಬೆಂಗಳೂರಿನ ಬಸವನಗುಡಿಯ ದೊಡ್ಡ ಬಸವಣ್ಣ ದೇವಸ್ಥಾನದ ಆವರಣದಲ್ಲಿ ಕಾರ್ತಿಕ ಮಾಸದ ಕೊನೆಯ ಸೋಮವಾರದಂದು ನಡೆಯುವ ಕಡಲೆಕಾಯಿ ಪರಿಸೆಯು ನವೆಂಬರ್ 17 ಮತ್ತು 18ರಂದು ನಡೆಯಿತು. ಭಕ್ತಿಯ ಹೆಸರಲ್ಲಿ ನಡೆಯುವ ಈ ಸಾಂಪ್ರದಾಯಿಕ ಆಚರಣೆಯು ಈ ಬಾರಿ ಸ್ವಲ್ಪ ಮಟ್ಟಿಗೆ ತನ್ನ ಮೆರಗನ್ನು ಕಳೆದುಕೊಂಡಿತ್ತು. ಇದರ ಮೂಲ ಕಾರಣ ಸತತವಾಗಿ ಕಾಡುತ್ತಿರುವ ಬರದ ಛಾಯೆ ಈ ವರ್ಷ ಕಡಲೆಕಾಯಿಗೂ ವ್ಯಾಪಿಸಿತ್ತು. ಇದರ ಪರಿಣಾಮ ಗ್ರಾಹಕರಿಗೆ ತುಸು ದುಬಾರಿ ಎನಿಸಬಹುದಾದ ಬೆಲೆ ಏರಿಕೆ ವಹಿವಾಟನ್ನು ಈ ಬಾರಿ ಸ್ವಲ್ಪ ಮಟ್ಟಿಗೆ ಕುಗ್ಗಿಸಿತು. ಕರ್ನಾಟಕದ ವಿವಿಧ ಭಾಗಗಳ ಕಡಲೆಕಾಯಿ ಬೆಳೆಗಾರರನ್ನೂ ವಿವಿಧ ತಳಿಗಳನ್ನೂ ಒಗ್ಗೂಡಿಸುವ ಇಂತಹ ಸಾಂಪ್ರದಾಯಿಕ ಮೇಳಗಳು ಜೀವ ವೈವಿಧ್ಯತೆಯನ್ನು ಉಳಿಸಿ ಬೆಳೆಸುವುದರಲ್ಲಿ ತಮ್ಮದೇ ಪಾತ್ರವನ್ನು ವಹಿಸುತ್ತವೆ. ಇಂತಹ ಆಚರಣೆಗಳು ದೇಶೀ ತಳಿಗಳನ್ನು ದೇವರ ಹೆಸರಲ್ಲಿ ಉಳಿಸುವುದಲ್ಲದೆ ಅದನ್ನು ಆಧುನಿಕ ನಾಗರೀಕತೆಗೆ ಪರಿಚಯಿಸಿ ಅದರ ಮಹತ್ವವನ್ನು ಉಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅನೇಕ ತಳಿಗಳ ಪರಿಚಯಕ್ಕೆ ಇಂಥಹ ಆಚರಣೆಗಳು ವೇದಿಕೆಯನ್ನು ಕಲ್ಪಿಸಿಕೊಡುವುದಲ್ಲದೆ, ಬೆಳೆಗಾರರ ಮತ್ತು ಗ್ರಾಹಕರ ನಡುವಿನ ಸಂಬಂಧವನ್ನು ವೃದ್ಧಿಸುತ್ತದೆ. ಇಂತಹ ಸಾಂಪ್ರದಾಯಿಕ ಆಚರಣೆಗಳು ಜನಪದ ಸಮೂಹದಲ್ಲಿ ತನ್ನದೇ ಆದ ಛಾಪನ್ನು ಮೂಡಿಸುತ್ತವೆ. ಭಕ್ತಿಯ ಹೆಸರಲ್ಲಿ ನಡೆಯುವ ಇಂತಹ ವೈವಿಧ್ಯಮಯ ಆಚರಣೆಗಳು ಉಳಿದ ಬೆಳೆಗಳಿಗೂ ವಿಸ್ತಾರಗೊಂಡರೆ ಜೀವ ವೈವಿಧ್ಯತೆ ಮತ್ತು ತಳಿ ಸಂರಕ್ಷಣೆಯಲ್ಲಿ ಉತ್ತಮ ಕೊಡುಗೆಗಳಾಗುತ್ತವೆ.

ಕೃಷಿ-ತೋಟಗಾರಿಕೆ

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕು ಬಂಗಾಡಿ ಪ್ರಾಂತ್ಯದಲ್ಲಿ ವಿಶಿಷ್ಟ ಬಹು ಬೆಳೆ ಪದ್ಧತಿಯೊಂದು ರೂಢಿಯಲ್ಲಿದೆ. ಕೃಷಿ ಮತ್ತು ತೋಟಗಾರಿಕೆಗಳು ಹದವಾಗಿ ಮಿಶ್ರಿತವಾಗಿರುವ ಈ ಪದ್ಧತಿ ಸುಸ್ಥಿರ ಹಾಗೂ ಸ್ವಾವಲಂಬಿ ಕೃಷಿಯ ದ್ಯೋತಕ. ಮಿತ್ತಬಾಗಿಲು ಗ್ರಾಮದ ಮಾಪಲದಡಿ ಮನೆಯ ಸಂಜೀವ ಗೌಡರ ಜಮೀನಿನಲ್ಲಿ ನಾವು ಕಂಡಂತೆ ಭತ್ತದ ಗದ್ದೆಗಳ ಮಧ್ಯದಲ್ಲಿ ಅಲ್ಲಲ್ಲಿ ತೆಂಗಿನ ಮರಗಳನ್ನು ಬೆಳೆಸಲಾಗುತ್ತದೆ. (ಪ್ರತಿ ಎಕರೆಗೆ 32 ತೆಂಗಿನ ಮರ). ತೆಂಗಿನ ಮರಗಳ ಬುಡದಲ್ಲಿ ಪೈರು ಅಲಸಂದೆ (ಕೈಲ್ ಲತ್ತಂಡೆ-ತುಳು), ಬೆಂಡೆ, ಮುಳ್ಳು ಸೌತೆ, ಕುಂದ್ರಿ ಸೌತೆ, ಹೀರೇಕಾಯಿ, ಹಾಗಲಕಾಯಿ ಮುಂತಾದ ತರಕಾರಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಪ್ರತಿ ತೆಂಗಿನ ಮರದ ಬುಡಕ್ಕೆ ಕೊಟ್ಟಿಗೆ ಗೊಬ್ಬರವನ್ನು ಹಾಕಿ ಸಾಮಾನ್ಯವಾಗಿ ಜೂನ್ ತಿಂಗಳಲ್ಲಿ ತರಕಾರಿ ಬೆಳೆಗಳನ್ನು ಬಿತ್ತಲಾಗುತ್ತದೆ. ಸೆಪ್ಟೆಂಬರ್ ತಿಂಗಳಿಂದ ಇವುಗಳ ಇಳುವರಿ ಪ್ರಾರಂಭವಾಗಿ ವರ್ಷದ ಬಹುತೇಕ ಕಾಲಕ್ಕೆ ಅಗತ್ಯವಾದ ಬಹುಮುಖ್ಯ ತರಕಾರಿಗಳು ಇದರಿಂದ ಲಭ್ಯ. ಈ ಪದ್ಧತಿ ಪರಂಪರಾಗತವಾಗಿ ಆಚರಣೆಯಲ್ಲಿದೆ. ಈ ರೀತಿ ಬೆಳೆದ ತರಕಾರಿಗಳಿಗೆ ರುಚಿ ಹೆಚ್ಚು ಎಂಬುದು ಅವರ ಅಭಿಪ್ರಾಯ. ಇಲ್ಲಿ ಬಹುತೇಕ ನಾಟಿ ತಳಿಗಳನ್ನು ಬಳಸಲಾಗುತ್ತಿದ್ದು ಇವುಗಳ ಬೀಜಗಳನ್ನು ಬುಟ್ಟಿಗಳಲ್ಲಿ ಸುತ್ತಿಟ್ಟು ಅಟ್ಟದ ಮೇಲೆ ಸಂರಕ್ಷಿಸಿಡಲಾಗುತ್ತದೆ. ಇವರು ಬಳಸುವ ಪೈರು ಅಲಸಂದೆ ಅಥವಾ ಕೈಲ್ ಲತ್ತಂಡೆ ತಳಿಯು ಸುಮಾರು ಒಂದೂವರೆ ಅಡಿ ಉದ್ದದ ಕಾಯಿ ಬಿಡುತ್ತದೆ. ಅದರಲ್ಲೂ ಕೆಂಪು ಪೈರು ಅಲಸಂಡೆ ತಳಿಯು ಸಂಜೀವಗೌಡರ ತೋಟದ ವಿಶೇಷವಂತೆ. ಈ ರೀತಿ ಬೆಳೆದ ಬೆಳೆಗಳಿಗೆ ರೋಗ-ಕೀಟಗಳು ಬರುವುದು ಕಡಿಮೆ. ಆಕಸ್ಮಾತ್ ಬಂದರೂ ಬೂದಿ ಮತ್ತು ಅಕ್ಕಿ ತೌಡುಗಳನ್ನು ಎರಚಿ ಹತೋಟಿಗೆ ತರುತ್ತಾರಂತೆ. ಹೀಗೆ ಬೆಳೆದು ಮನೆಗೆ ಬಳಸಿ ಉಳಿದದ್ದನ್ನು ನೆರೆಹೊರೆಯವರಿಗೂ ನೀಡುತ್ತಾರೆ. ಭತ್ತದ ಸುಗ್ಗಿ ಬೆಳೆಯ ನಂತರ 'ಹೆಸರು' ಬಿತ್ತನೆ ಮಾಡುತ್ತಾರೆ. ಇಂತಹ ಪದ್ಧತಿಗಳಿಂದಾಗಿಯೇ ಕರಾವಳಿ-ಮಲೆನಾಡುಗಳ ಬಹಳಷ್ಟು ಜನ ಇವತ್ತಿಗೂ ಸ್ವಾವಲಂಬಿ ಬದುಕನ್ನು ಬಾಳುತ್ತಿರುವುದು ನಿಜವೆ?.

ಕಳ್ಳು ಹಾಕುವುದು

ದೇಶೀಯವಾಗಿ ತುಳು ಬಾಷೆಯಲ್ಲಿ 'ಕಳ್ಯಂಡೆ' ಎಂದು ಕರೆಯಲಾಗುವ "ಕಳ್ಳು ಹಾಕುವುದು" ದಕ್ಷಿಣ ಕನ್ನಡ ಪ್ರಾಂತ್ಯದಲ್ಲಿ ಕಂಡು ಬರುವ ಮತ್ತೊಂದು ವಿಶಿಷ್ಟ ಪದ್ಧತಿ. ಈ ಪ್ರಾಂತ್ಯದ ಸಂಪ್ರದಾಯದಂತೆ ಕರ್ಕಾಟಕ ಅಮವಾಸ್ಯೆಯ ದಿನ ಕಳ್ಳಿ *(Jatropha sp.)*, ಬಿದಿರು *(Bambusa arundinacea,* Willd) ಎಲೆ, ವಾಟೆ *(Ochlandra scriptonia C.)* ಸೊಪ್ಪು, ರಾಹು ಬೀಜ *(Elaeocarpus serratus, L)* ದ ಸೊಪ್ಪು, ಕರಿಯ ನೆಕ್ಕಿ *(Justicia gendarussa, L.F.)* ಸೊಪ್ಪುಗಳನ್ನು ಬಿದಿರಿನ ಅಂಡೆ (ಬಿದಿರಿನ ಬೊಂಬು)ಯೊಳಗೆ ಇಟ್ಟು ಒಂದು ಕೋಲಿಗೆ ಸಿಕ್ಕಿಸಿ ಹೊಲ-ಗದ್ದೆಯ ಅಂಚಲ್ಲಿ ಮತ್ತು ಗೊಬ್ಬರದ ರಾಶಿಯ ಮಧ್ಯೆ ನೆಡುತ್ತಾರೆ. ಇದಕ್ಕೆ ನೆಲ್ಲಿ *(Emblica officinalis)*, ಬಗಿನೆ *(Caryota urens, L.)*, ಕಾಸರಕ *(Strychnos nuxvomica, L.)* ಇನ್ನಿತರ ಸೊಪ್ಪುಗಳನ್ನು ಬಳಸುತ್ತಾರಲ್ಲದೆ ಇವುಗಳ ಸಂಖ್ಯೆ ಬೆಸ ಸಂಖ್ಯೆಯಾಗಿರುವಂತೆ ನೋಡಿಕೊಳ್ಳುತ್ತಾರೆ. ಇದಕ್ಕಾಗಿ ಅಮವಾಸ್ಯೆಯ ಹಿಂದಿನ ದಿವಸವೇ ಮರಗಳಿಗೆ ನೂಲು ಕಟ್ಟಿ ಮರುದಿನ ಬೆಳಿಗ್ಗೆಯೇ ಎದ್ದು ಯಾರ ಮುಖವನ್ನೂ ನೋಡದೆ ಹೋಗಿ ಸೊಪ್ಪುಗಳನ್ನು ಕೊಯ್ದು ತರುತ್ತಾರೆ. ಈ ಪದ್ಧತಿಯನ್ನು ಮುಂಗಾರಿನ ಬೆಳೆಗೆ ಮಾತ್ರ ಅನುಸರಿಸುವ ಇವರು ಇದರಿಂದ ಬೆಳೆಗಳಿಗೆ ರೋಗನಿರೋಧಕ ಶಕ್ತಿ ಬರುತ್ತದೆ ಎಂದು ಬಲವಾಗಿ ನಂಬಿದ್ದಾರೆ.



ಇದರ ಜೊತೆಗೆ ಆಲೆ ಮರದ (ಸಪ್ತ ಪರಣಿ) ಬೇರನ್ನು ಜಜ್ಜಿ ರಸಕುಡಿಯುವುದರಿಂದ ಮನುಷ್ಯರಿಗೆ ರೋಗನಿರೋಧಕ ಶಕ್ತಿ ಹೆಚ್ಚಾಗುತ್ತದೆ ಎಂಬುದೂ ಇವರ ನಂಬಿಕೆ. ನಾಟಿ ವೈದ್ಯರೂ ಕೂಡ ತಮ್ಮ ಮದ್ದನ್ನು ಕರ್ಕಾಟಕ ಅಮವಾಸ್ಯೆಯಲ್ಲೇ ಸಂಗ್ರಹಿಸುತ್ತಾರಂತೆ. ಇವರ ನಂಬಿಕೆಗಳು ಏನೇ ಇರಲಿ ಇವುಗಳ ವೈಜ್ಞಾನಿಕ ಹಿನ್ನೆಲೆಯನ್ನು ವಿಶ್ಲೇಷಿಸಬಹುದಾಗಿದೆ. ಇಲ್ಲಿ ಬಳಸಲಾಗುವ ಕಳ್ಳಿ, ನೆಕ್ಕಿ, ನೆಲ್ಲಿ, ಕಾಸರಕ ಮುಂತಾದ ಸೊಪ್ಪುಗಳಲ್ಲಿ ಕೀಟ ಮತ್ತು ರೋಗ ನಾಶಕ ಮತ್ತು ನಿರೋಧಕ ಶಕ್ತಿ ಇರುವುದು ಹಲವು ವೈಜ್ಞಾನಿಕ ಅಧ್ಯಯನಗಳಿಂದ ಧೃಡಪಟ್ಟಿರುವುದು ಗಮನಾರ್ಹ.

ಸಂಗ್ರಹ ಲೇಖನ: ಮು.ಲ. ಕೆಂಪೇಗೌಡ ನಾಗಮಂಗಲ

ಹೊನಗೊನೆ ಸೊಪ್ಪಿನ ತಂಬ್ಳಿ

ಒಂದು ಮುಷ್ಠಿ ಹೊನಗೊನೆ ಸೊಪ್ಪ *(Alternanthera sessilis)*ನ್ನು (ಚಿಗುರು/ಕುಡಿ) ಬೆಳಗಿನ ಹೊತ್ತು ಕಿತ್ತು ತಂದು, ತೊಳೆದು, ಸಣ್ಣ ಒಲೆ ಉರಿಯಲ್ಲಿ ಬಾಡಿಸಿ (ಹುರಿದು) ನಂತರ 8-10 ಕಾಳು ಕಾಳು ಮೆಣಸು ಮತ್ತು ಅರ್ಧ ಕಪ್ ತೆಂಗಿನ ತುರಿಯೊಂದಿಗೆ ರುಬ್ಬಬೇಕು. ಮೂರು ಲೋಟ ಕಡಿದ ಮಜ್ಜಿಗೆಯೊಂದಿಗೆ ರುಬ್ಬಿದ ಪದಾರ್ಥ ಬೆರಸಿ ನಂತರ ಜೀರಿಗೆ, ಸಾಸಿವೆ ಮತ್ತು ಒಣ ಮೆಣಸಿನ ಕಾಯಿಯ ಒಗ್ಗರಣೆ (ತುಪ್ಪ/ತೆಂಗಿನೆಣ್ಣೆ ಬಳಸಿ) ಕೊಡುವುದು ವಾಡಿಕೆ. ನಂತರ ರುಚಿಗೆ ಒಪ್ಪುವಷ್ಟು ಉಪ್ಪು ಸೇರಿಸಿದರಾಯಿತು. ಇದು ಮೆದುಳು ಮತ್ತು ನರಗಳನ್ನು ಸುಸ್ಥಿತಿಗೆ ತರುತ್ತದೆ. ಮಕ್ಕಳಿಗೆ ವಿಶೇಷ. ವಾತ ಹರ, ಪಿತ್ತ ಹರ, ತಂಪು ಗುಣವುಳ್ಳದ್ದು. ತುಂಬ ಪುಷ್ಠಿದಾಯಕ, ಕೂದಲ ಬೆಳವಣಿಗೆಗೆ ಸಹಕಾರಿ, ರಕ್ತವರ್ಧಕ, ಕಣ್ಣಿನ ಸೂಕ್ಷ್ಮತೆ ಹೆಚ್ಚಿಸುತ್ತದೆ ಆದರೆ ಮಳೆಗಾಲದಲ್ಲಿ ಇದರ ಉಪಯೋಗ ಒಳಿತಲ್ಲ.

ಮೂಲ: ಸಂಜೀವನ ಕೃಷಿ ಸಂಶೋಧನಾ ಪ್ರತಿಷ್ಠಾನ ಮತ್ತು ಕೃಷಿ ಪ್ರಯೋಗ ಪರಿವಾರ, ಕರ್ನಾಟಕ

ಸಾವಯವ ಸಂತೆ

ಸಾವಯವ ಕೃಷಿ ಉತ್ತೇಜಕ ಸಂಘವು (APOF) ಔರಂಗಾಬಾದಿನ ಸಮಗ್ರ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮತ್ತು ಬೆಂಗಳೂರಿನ ಜನೋದಯ ಸಂಘಟನೆಯೊಡನೆ ಸೇರಿ ಪ್ರತಿ ಹದಿನೈದು ದಿನಗಳಿಗೊಮ್ಮೆ 'ಸಾವಯವ ಸಂತೆ' (Organic bazaar) ಯನ್ನು ಏರ್ಪಡಿಸುತ್ತಿದೆ. ಈ ಸಂತೆಯು 'ಸಾವಯವ ಕೃಷಿ ಉತ್ತೇಜಕ ಸಂಘ'ದ ನೂತನ ಕಛೇರಿ ಅಂಗಳದಲ್ಲಿ ನಡೆಯುತ್ತಿದ್ದು ಈ ರೀತಿಯ ಮೊದಲ ಸಂತೆ ಕಳೆದ ಅಕ್ಟೋಬರ್ 18, 2003 ರಂದು ನಡೆಯಿತು. ಸಾವಯವ ರೈತ ಮತ್ತು ಗ್ರಾಹಕರನ್ನು ನೇರ ಸಂಪರ್ಕಕ್ಕೆ ತರುವುದು ಈ ಸಂತೆಯ ಮುಖ್ಯ ಉದ್ದೇಶವಾಗಿದೆ. ಇಲ್ಲಿ ವಿವಿಧ ಸಾವಯವ ಕೃಷಿಕರು ತರುವ ಸಾವಯವ ಉತ್ಪನ್ನಗಳನ್ನು ಸುತ್ತಮುತ್ತಲ ಹಲವಾರು ಗ್ರಾಹಕರು ಖರೀದಿಸುತ್ತಿದ್ದಾರೆ. ಸಂಘದ ನೂತನ ಕಛೇರಿಯ ವಿಳಾಸ ಇಂತಿದೆ: ಹಿರಿಯ ವಿದ್ಯಾರ್ಥಿಗಳ ಸಂಘದ ಕಟ್ಟಡ (Alumni Association), ಪಶು ವೈದ್ಯಕೀಯ ಕಾಲೇಜಿನ ಪಕ್ಕ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು-24.

ಭಾರತೀಯ ಸಾವಯವ ಕೃಷಿ ಸಂಘಟನೆಯ ರಾಜ್ಯ ಮಟ್ಟದ ಸಭೆ

ಭಾರತೀಯ ಸಾವಯವ ಕೃಷಿ ಸಂಘಟನೆಯ ಕರ್ನಾಟಕ ಘಟಕದ ರಾಜ್ಯಮಟ್ಟದ ಸಭೆಯು ಕಳೆದ ಅಕ್ಟೋಬರ್ 28-29, 2003ರಂದು ಮೈಸೂರಿನ 'ಕರ್ನಾಟಕ ಕೃಷಿ ಮಾರಾಟ ಸಂಸ್ಥೆ'ಯಲ್ಲಿ ನಡೆಯಿತು. ಎರಡು ದಿನಗಳ ಕಾಲ ನಡೆದ ಈ ಸಭೆಯಲ್ಲಿ ಹತಾಶ ರೈತರ ಆತ್ಮಹತ್ಯೆಗಳ ಹಿಂದಿನ ಸಮಸ್ಯೆಗಳ ಬಗ್ಗೆ ಚಿಂತಿಸಲಾಯಿತು. ಪ್ರಸ್ತುತ ಸಾಲ ಸೌಲಭ್ಯ ವ್ಯವಸ್ಥೆ, ಸಬ್ಸಿಡಿ, ಬಂಡವಾಳ, ಸಂಶೋಧನೆ, ಮಾರಾಟ ವ್ಯವಸ್ಥೆ, ಇತ್ಯಾದಿ ಕುರಿತ ನೀತಿಗಳ ಮೂಲಭೂತ ಬದಲಾವಣೆ, ಬಲಾಢ್ಯವಾಗುತ್ತಿರುವ ವಿಶ್ವ ವ್ಯಾಪಾರ ಸಂಸ್ಥೆಯನ್ನು ದುರ್ಬಲಗೊಳಿಸುವ ಮತ್ತು ವಂಶವಾಹೀ ಮಾರ್ಪಡಿತ ಬೆಳೆ *(Genetically modified crops)* ಗಳ ವಿರೋಧ, ಇತ್ಯಾದಿ ವಿಚಾರಗಳು ಚರ್ಚಿಗೊಳಪಟ್ಟವು. ಈ ಸಭೆಯು ಸಾವಯವ ಕೃಷಿ ಯಶಸ್ಸಾಗಲು ಅಗತ್ಯವಾದ ಕೃಷಿ ಭೂಮಿಯಲ್ಲಿ ಸಾವಯವ ಕೃಷಿ ಕುರಿತ ಸಂವಾದ - ಸಾವಯವ ಕೃಷಿಕರ ನಡುವೆ ಅನುಭವಗಳ ಹಂಚಿಕೆ-ಕೃಷಿ ಅಧ್ಯಯನ ಪ್ರವಾಸಗಳು - ವಿವಿಧ ಪ್ರಾದೇಶಿಕ ವಲಯಗಳಲ್ಲಿ ಸಾವಯವ ಕೃಷಿಕರು ಎದುರಿಸುತ್ತಿರುವ ನಿರ್ದಿಷ್ಟ ಸಮಸ್ಯೆಗಳ ನಿರೂಪಣೆ - ತರಬೇತಿ ಕಾರ್ಯಕ್ರಮಗಳು - ಸಾವಯವ ಉತ್ಪನ್ನಗಳ ಮಾರಾಟ ವ್ಯವಸ್ಥೆ - ಸಾವಯವ ಉತ್ಪನ್ನಗಳ ಗುಣಮಟ್ಟ ಸುಧಾರಣೆ ಮುಂತಾದವುಗಳ ಕುರಿತು ಚರ್ಚಿಸಿ ಅದರ ಆಧಾರದ ಮೇಲೆ ರೈತ ಕೇಂದ್ರಿತ ಹಾಗೂ ರೈತರೇ ನಿಯೋಜಿತ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸುವ ಗುರಿಯನ್ನು ಹೊಂದಿದೆ.

ಸಭೆಯಲ್ಲಿ ಸಾವಯವ ಕೃಷಿಕರಷ್ಟೇ ಅಲ್ಲದೆ ಸಾವಯವ ಕೃಷಿ ಪದ್ಧತಿ ಅಳವಡಿಸಲು ಸಿದ್ಧರಿರುವ ರೈತರು, ರೈತ ಮುಖಂಡರು, ವಿಜ್ಞಾನಿಗಳು, ಕೃಷಿ ನೀತಿ ಯೋಜಕರು, ಕೃಷಿ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ದೇಶೀ ಬಿತ್ತನೆ ಬೀಜ ಹಾಗೂ ಸಾವಯವ ಕೃಷಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯನ್ನು ಮಾಡಲಾಗಿತ್ತು.

ಕರ್ನಾಟಕ ಅನುಶೋಧಕರ ಜಾಲದ ಸಭೆ

ಸೆಪ್ಟೆಂಬರ್ 22 ಮತ್ತು 23ರಂದು ತುಮಕೂರಿನ ಶ್ರೀ ಸಿದ್ದಾರ್ಥ ತಾಂತ್ರಿಕ ಸಂಸ್ಥೆಯಲ್ಲಿ ನಡೆದ 'ತಳಮಟ್ಟದ ಅನುಶೋಧನೆಗಳನ್ನು ಪೋಷಿಸಿ, ಪ್ರೋತ್ಸಾಹಿಸುವ ಕಾರ್ಯಾಗಾರ ಮತ್ತು ವಸ್ತು ಪ್ರದರ್ಶನ'ದ ಸಂದರ್ಭದಲ್ಲಿ "ಕರ್ನಾಟಕ ಅನುಶೋಧಕರ ಜಾಲ" (Karnataka Innovators Network-KIN) ದ ಸಭೆಯೊಂದನ್ನು ನಡೆಸಲಾಯಿತು. ಈ ಸಭೆಯಲ್ಲಿ ಜಾಲದ ಕುರಿತು ಕೆಲವೊಂದು ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು. ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಧ್ಯೇಯೋದ್ದೇಶಗಳನ್ನು ಗಟ್ಟಿಮಾಡುವ ಉದ್ದೇಶದ KIN ಕರ್ನಾಟಕದಲ್ಲಿ ಅನುಶೋಧಕರಿಗೆ ಪರಸ್ಪರ ಸಹಕಾರ ನೀಡುತ್ತಾ ತಳಮಟ್ಟದ ಅನುಶೋಧನೆಗೆ ಭದ್ರ ನೆಲೆ ಒದಗಿಸಲು ಶಕ್ತಿಮೀರಿ ಪ್ರಯತ್ನಿಸಲಿದೆ. ಜಾಲಕ್ಕೆ ವ್ಯಾಪಕ ಸದಸ್ಯತ್ವವನ್ನು ಮಾಡಿಸುವ ಜೊತೆಗೆ ಕಾಲಾಂತರದಲ್ಲಿ ಜಾಲವನ್ನು ನೋಂದಾಯಿಸುವ ಮೂಲಕ ಇದನ್ನು ಗಟ್ಟಿಗೊಳಿಸಲು ತೀರ್ಮಾನಿಸಲಾಯಿತು. ಈ ಉದ್ದೇಶಕ್ಕಾಗಿ ಜಿಲ್ಲಾವಾರು ಪ್ರಾದೇಶಿಕ ಸಂಚಾಲಕರನ್ನು ಗುರುತಿಸಲಾಯಿತು. ಕೇರಳದಲ್ಲಿ ಉಳಿದಿರುವ ಅಚ್ಚ ಕನ್ನಡ ಪ್ರದೇಶವಾದ ಕಾಸರಗೋಡನ್ನು ಜಾಲದ ಭಾಗವೆಂದು ಪರಿಗಣಿಸಲಾಯಿತು. ಈ ಸಂದರ್ಭದಲ್ಲಿ ನಿರ್ಧರಿಸಲಾದ ಪ್ರಾದೇಶಿಕ ಸಂಚಾಲಕರ ಪಟ್ಟಿ ಇಂತಿದೆ.

ಹೆಸರು	ಪ್ರದೇಶ/ಜಿಲ್ಲೆಗಳು
ಸುದರ್ಶನ	ಕರಾವಳಿ ಪ್ರದೇಶ (ದಕ್ಷಿಣ ಕನ್ನಡ, ಉತ್ತರ ಕನ್ನಡ, ಕಾಸರಗೋಡು, ಉಡುಪಿ)
ಡಾ. ಎ.ಬಿ. ಪಾಟೀಲ್	ಈಶಾನ್ಯ ಕರ್ನಾಟಕ ಭಾಗ (ಬಿಜಾಪುರ, ಗುಲ್ಬರ್ಗ, ಬೀದರ್, ರಾಯಚೂರು, ಬಾಗಲಕೋಟೆ
ಡಾ. ಬೂದಿಹಾಳ್	ಧಾರವಾಡ ವಿಭಾಗ
ಬಸವರಾಜು ಸಂತೇ ಶಿವರ	ಹಾಸನ ವಿಭಾಗ
ಕೃಷ್ಣಪ್ರಸಾದ್	ಬೆಂಗಳೂರು ವಿಭಾಗ
ನರಸಿಂಹ ಭಂಡಾರಿ, ಬಿ.ಎನ್ ಸ್ವಾಮಿ	ಚಿಕ್ಕಮಗಳೂರು
ಲಿಂಗಮಾದಯ್ಯ, ವಿಜಯಕುಮಾರ್	ಬೆಂಗಳೂರು (ಗ್ರಾಮಾಂತರ)
ಎನ್.ಎಂ. ಬಡಿಗೇರ,	ಗದಗ, ಹಾವೇರಿ
ಎಸ್.ಎಂ. ಮಂಗಳಿ, ರಾಜಶೇಖರಯ್ಯ	
ಮಾಧವ ಡೋಂಗ್ರೆ	ಉಡುಪಿ
ವೆಂಕಟರಮಣ ಭಟ್	ಕಾಸರಗೋಡು
ಕೃಷ್ಣಮೂರ್ತಿ, ಸೋಮನಾಥ ಅಯ್ಯರ್	ಶಿವಮೊಗ್ಗ
ಎಂ.ಜಿ. ಹೆಗಡೆ, ಗಿರಿಧರ್ ಕಿಬ್ಬಳ್ಳಿ	ಉತ್ತರ ಕನ್ನಡ
ಪುಷ್ಪ, ಹರಿಯಪ್ಪಗೌಡ	ದಕ್ಷಿಣ ಕನ್ನಡ ಮತ್ತು ಕೊಡಗು
ಅಬ್ದುಲ್ ಲತೀಫ್	ಗುಲ್ಬರ್ಗ
ಶಂಕರಲಿಂಗಯ್ಯ, ಆನಂದ್ ಡಿ.ಎನ್	ತುಮಕೂರು
ಮಾಳಯ್ಯ, ಕಂಪಣ್ಣಗೌಡ	ಮೈಸೂರು
ಅಣ್ಣಾಸಾಹೇಬ್ ಉದ್ಗಾವೆ	ಬೆಳಗಾವಿ
ಫಿಲಿಪ್ ಡಿಸೋಜ	ದಕ್ಷಿಣ ಕನ್ನಡ
ರಾಜಶೇಖರ್ ಬಿ.ಬಿ.	ಮಲ್ನಾಡ ಪ್ರಾಂತ್ಯ


ಕಾವೇರಿ ಜಲಾಶಯದ ನೀರಿನ ಸಮಸ್ಯೆಗೆ ರೈತರೊಬ್ಬರ ಪರಿಹಾರ

ಯಾವುದೇ ಜಲಾಶಯದ ನೀರಿನ ಶೇಖರಣೆ ಎಷ್ಟು ಮುಖ್ಯವೋ ಬಳಕೆಯೂ ಅಷ್ಟೇ ಮುಖ್ಯ. ನೀರು ಪೂರೈಸಿದಾಗ ಮಣ್ಣಿನ ಆರೋಗ್ಯ ಸಮತೋಲನದಲ್ಲಿರುವಂತೆ ನೋಡಿಕೊಳ್ಳಬೇಕು. ಈ ಸಮತೋಲನ ಸರಿಯಾಗಿರಬೇಕಾದರೆ ನೀರಿನ ಪೂರೈಕೆ ಬಗ್ಗೆ ಹೆಚ್ಚಿನ ತಿಳುವಳಿಕೆ ರೈತರಲ್ಲಿ ಬರಬೇಕಾಗಿದೆ.

ಈಗ ಉದ್ಭವವಾಗಿರುವ ಕಾವೇರಿ ನೀರಿನ ಸಮಸ್ಯೆ ಕೇವಲ ತಮಿಳುನಾಡು, ಕರ್ನಾಟಕಕ್ಕೆ ಮಾತ್ರವಲ್ಲ, ಎಲ್ಲಾ ರೈತರ ಸಮಸ್ಯೆ. ಈ ಜಲಾಶಯದಲ್ಲಿ ಶೇಖರಣೆಯಾದ ನೀರಿನಲ್ಲಿ ಅಂತರ್ಜಲದ ಶಕ್ತಿ ಹೆಚ್ಚಿಸಲು 1/4 ಭಾಗ ಮಾತ್ರ ಬಳಕೆಯಾಗುತ್ತದೆ. ಮೂರು ರಾಜ್ಯಗಳಲ್ಲಿ ಸಂತೃಪ್ತಿಯಾದ ಬೆಳೆ ಪಡೆಯಲು ಬೇಕಾಗಿರುವ ನೀರು 1/2 ಭಾಗ ಮಾತ್ರ ಸಾಕು. ನೀರಿನ ನಿರ್ವಹಣೆ ಬಗ್ಗೆ ಅರಿವಿಲ್ಲದ ಪ್ರಯುಕ್ತ 1/4 ಭಾಗ ನೀರು ಪೋಲಾಗುತ್ತದೆ. ಒಂದು ದಿನಕ್ಕೆ ಒಂದು ಗುಣಿ ಭತ್ತದ ಪೈರಿಗೆ 10 ಮಿಲಿ ಲೀಟರ್ ನೀರು ಸಾಕು. ಆದರೆ ನಮ್ಮ ರೈತರು ಪೂರೈಸುವ ನೀರಿನ ಪ್ರಮಾಣ 100 ಲೀಟರ್ ಆಗಿದೆ. ಈ ಕ್ರಮದಿಂದ ಕಳಪೆ ಗುಣಮಟ್ಟದ ಕಡಿಮೆ ಇಳುವರಿ ಪಡೆಯುತ್ತಿದ್ದಾರೆ.

2ನೇ ಭಾಗದಲ್ಲಿ ಮೊದಲ ಒಂದು ವರ್ಷ ಅರೆ ನೀರಾವರಿ ಬೆಳೆ ಬೆಳೆದ ನಂತರ ಭತ್ತದ ಬೆಳೆ 2 ವರ್ಷ ಬೆಳೆದು ಮೂರನೇ ವರ್ಷ ಕಬ್ಬನ್ನು ನಾಟಿ ಮಾಡುವುದರಿಂದ ಉತ್ತಮ ಇಳುವರಿ ಪಡೆಯಲು ಸಾಧ್ಯ.

ಈ ರೀತಿ 1 ಮತ್ತು 2ನೇ ಭಾಗದ ಪದ್ಧತಿಗಳನ್ನು ಅದಲು ಬದಲು ಮಾಡಿಕೊಂಡು ಬೆಳೆ ಬೆಳೆದರೆ ಉತ್ತಮ ನೀರಾವರಿ ನಿರ್ವಹಣೆ ನಡೆದು ನೀರಿನ ಉಳಿತಾಯವಾಗುತ್ತದೆ. 3ನೇ ಭಾಗದಲ್ಲಿ ತಗ್ಗಿನ ಪ್ರದೇಶವಾಗಿರುವ ಕಾರಣ ನೀರಿನ ಪೂರೈಕೆ ಹೆಚ್ಚಾಗಿರುತ್ತದೆ. ಈ ರೀತಿಯ ಪ್ರದೇಶಗಳಲ್ಲಿ 1 ಎಕರೆಯ 1/4 ಭಾಗದಲ್ಲಿ ಅಪ್ಪಸೆಣಬು (Sun hemp) ಉಳಿದ 3/4 ಭಾಗದಲ್ಲಿ ಭತ್ತ ಬಿತ್ತನೆ ಮಾಡಿದರೆ ಮಣ್ಣಿನ ಆರೋಗ್ಯ ಉತ್ತಮವಾಗಿರುತ್ತದೆ. 1/4 ಭಾಗದಲ್ಲಿ ಬೆಳೆಯುವ ಅಪ್ಪಸೆಣಬಿನ ಬೆಳೆಯ ಜಾಗವನ್ನು ಪ್ರತಿ ಬಾರಿ ಬದಲಾಯಿಸುತ್ತಾ ಬೆಳೆಯಬೇಕು. ಹೀಗೆ ನಾಲ್ಕು ವರ್ಷಗಳಿಗೊಮ್ಮೆ ಆ ಜಾಗವು ಫಲವತ್ತಾಗುತ್ತದೆ. ಈ ರೀತಿ ಬೆಳೆ ಪರಿವರ್ತನೆಯಿಂದ ಮಣ್ಣಿನ ಆರೋಗ್ಯ ಉತ್ತಮವಾಗುವುದಲ್ಲದೆ ಪ್ರತಿ ವರ್ಷ 1/4 ಭಾಗ ಪ್ರದೇಶಕ್ಕೆ ನೀರಿನ ಪೂರೈಕೆ ಬೇಕಾಗುವುದಿಲ್ಲ. ಒಟ್ಟು ಪ್ರದೇಶದಲ್ಲಿ ನೂರಾರು ಎಕರೆ ಪ್ರದೇಶಕ್ಕೆ ನೀರಿನ ಪೂರೈಕೆ ನಿಲ್ಲಿಸಲು ಸಾಧ್ಯ. ನೀರಿನ ಉಳಿತಾಯವೂ ಆಗುತ್ತದೆ.



ಈ ಸಮಸ್ಯೆ ನಿವಾರಿಸಲು ಬೆಳೆ ಪರಿವರ್ತನಾ ಪದ್ಧತಿ (Rotation Crop) ಅನುಸರಿಸುವುದು (ಚಿತ್ರದಲ್ಲಿ ತೋರಿಸಿರುವ ರೀತಿ 1 ಮತ್ತು 2ನೇ ಭಾಗದಲ್ಲಿ ಈ ಪದ್ಧತಿ ಅನುಸರಿಸಬೇಕು) ಒಂದು ಉತ್ತಮ ಉಪಾಯವಾದೀತು.

1ನೇ ಭಾಗದಲ್ಲಿ 3 ವರ್ಷ ಕಬ್ಬಿನ ಬೆಳೆ ನೆಟ್ಟರೆ ನಾಲ್ಕನೇ ವರ್ಷ ಅರೆ ನೀರಾವರಿ ಬೆಳೆ ಬೆಳೆದು ಐದನೇ ವರ್ಷ ಭತ್ತದ ಬೆಳೆ ಬೆಳೆದರೆ, ನೀರಿನ ನಿರ್ವಹಣೆ ಉತ್ತಮವಾಗಿದ್ದು ಹೆಚ್ಚಿನ ಇಳುವರಿ ಪಡೆಯಲು ಸಾಧ್ಯ.

ಇದರಿಂದ ಕಬ್ಬಿನ ಉತ್ಪಾದನೆಯೂ ಕೂಡ ಹೆಚ್ಚಾಗಿ ಕಾರ್ಖಾನೆಗಳಿಗೆ ಸಮರ್ಪಕವಾಗಿ ಕಬ್ಬು ಪೂರೈಸಲು ಸಾಧ್ಯ. ಕಾರ್ಮಿಕರಿಗೂ ಕೈ ತುಂಬ ಕೆಲಸ ದೊರೆಯುತ್ತದೆ. ಕಾವೇರಿ ನೀರು ಎಲ್ಲಾ ರಾಜ್ಯಗಳಿಗೂ ದೊರೆತು ಈ ಸಮಸ್ಯೆ ನಿವಾರಣೆಯಾಗುತ್ತದೆ. ಜಲಾಶಯ ಭರ್ತಿಯಾಗದ ವರ್ಷ ಭತ್ತದ ಬಿತ್ತನೆ ನಿಲ್ಲಿಸಬೇಕು. ಅರೆ ನೀರಾವರಿ ಬೆಳೆ ಪದ್ಧತಿ ಕೈಗೊಳ್ಳಬೇಕು. ಈ ವಿಶಾಲ ದೃಷ್ಟಿ ರೈತರಲ್ಲಿ ಬರಲೇಬೇಕು.

ಬಿ. ಬಸವರಾಜು ಸಂತೇಶಿವರ

ನಾಟಿ ಔಷಧಿಗಳ ಡಾ. ಅನ್ನದಾನೇಶ್ವರ ಆದಿ

ಸಂಗ್ರಹ: ಭಾಗ್ಯಲಕ್ಷ್ಮಿ .ವಿ

ಸ್ವತ: ಆಯುರ್ವೇದ ವೈದ್ಯರಾಗಿದ್ದರೂ ತಮ್ಮ ಹಿರಿಯರಿಂದ ಬಂದ ಸಾಂಪ್ರದಾಯಿಕ ನಾಟಿ ಔಷಧ ಪದ್ಧತಿಗಳನ್ನು ಮೈಗೂಡಿಸಿಕೊಂಡು ಪಾಲಿಸುತ್ತಿರುವ ಕುಂಬಳಗೋಡಿನ ಡಾ. ಅನ್ನದಾನೇಶ್ವರ ಆದಿಯವರು ತಮ್ಮ ಅಚಲ ನಂಬಿಕೆಯ ನೈಪುಣ್ಯತೆಯಿಂದ ಹಲವಾರು ರೋಗಗಳನ್ನು ಗಿಡಮೂಲಿಕೆಗಳಿಂದ ವಾಸಿ ಮಾಡುತ್ತಾರೆ. ಸುಮಾರು 25 ವರ್ಷಗಳಿಂದಲೂ ಅನುಸರಿಸುತ್ತಿರುವ ಸುಲಭ, ಸರಳ, ಅಪಾಯಕಾರಿಯಲ್ಲದ, ಯಾವುದೇ ದುಷ್ಪರಿಣಾಮ ಬೀರದ ಇವರ ನಾಟೀ ವೈದ್ಯ ಪದ್ಧತಿ ಬಡವರಿಗೆ ನಿಲುಕುವಂತಹುದಾಗಿದೆ. ಇವರು ವಾಸಿ ಮಾಡುವ ಹಲವು ರೋಗಗಳ ವಿಧಾನವನ್ನು ಈ ಕೆಳಗೆ ಕೊಡಲಾಗಿದೆ.

ಬೋಳು ತಲೆ

ಕಾಲು ಕೆ.ಜಿ. ನೆಲ್ಲಿಕಾಯಿಯ ಬೀಜ ತೆಗೆದು ನುಣ್ಣಗೆ ರುಬ್ಬಿ ಅದಕ್ಕೆ ಕಾಲು ಕೆ.ಜಿ. ಜೇಕಿನಗಡ್ಡಿ ಪುಡಿಯನ್ನು ಮಿಶ್ರ ಮಾಡಿ ಮೂರೂವರೆ ಲೀಟರ್ ನೀರಿನಲ್ಲಿ ಚೆನ್ನಾಗಿ ಕುದಿಸಬೇಕು. ನೀರಿನ ಅಂಶ ಕಡಿಮೆ ಆದ ಮೇಲೆ ಅರ್ಧ ಕಿಲೋ ಎಳ್ಳೆಣ್ಣೆಯನ್ನು ಅದರಲ್ಲಿ ಹಾಕಿ ಕಡಿಮೆ ಉರಿಯಲ್ಲಿ ಕುದಿಸಬೇಕು. ನೀರಿನ ಅಂಶ ಸಂಪೂರ್ಣವಾಗಿ ಹೋದ ಮೇಲೆ ಅದನ್ನು ಸೋಸಿ, ಆರಿಸಿ ತಣ್ಣಗಾದ ಮೇಲೆ ಬಾಟಲಿಯಲ್ಲಿ ತುಂಬಿಡಬೇಕು.

ಮೂರ್ಛೆ ರೋಗಕ್ಕೆ

ಮೂರ್ಛೆ ರೋಗದಲ್ಲಿದ್ದವರಿಗೆ ಅಕ್ಕಿ ತೊಳೆದ ನೀರಿನಲ್ಲಿ ಹಸಿ ಶುಂಠಿಯನ್ನು ತೇದು ಆ ರಸವನ್ನು ಎರಡು ತೊಟ್ಟು ಕಣ್ಣಿನ ಒಳ ಭಾಗಕ್ಕೆ ಲೇಪಿಸಿದರೆ ಬೇಗನೆ ಪ್ರಜ್ಞೆ ತಿಳಿದೇಳುತ್ತಾರೆ.

ಅಪಸ್ಮಾರ

ಕಾಡಿಗರಸ ಎಲೆಗಳನ್ನು ನೀರಿನಲ್ಲಿ ಅರೆದು ತೆಗೆದ ರಸವನ್ನು ಅಪಸ್ಮಾರ (ಕೈ ಕಾಲುಗಳು ಸೆಟೆದುಕೊಳ್ಳುವುದು, ಬಾಯಲ್ಲಿ ಬುರುಗು, ಕಣ್ಣು ಬಾಯಿ ಸೊಟ್ಟಗಾಗುವುದು, ಪ್ರಜ್ಞಾಹೀನತೆ, ಕೈಕಾಲು ಬಡಿಯುವುದು) ದಿಂದ ನರಳುವವರಿಗೆ ಎರಡು ತೊಟ್ಟನ್ನು ಮೂಗಿನ ಹೊಳ್ಳೆಯೊಳಗೆ ಹಾಕಬೇಕಂತೆ.

ಮಣ್ಣು ತಿನ್ನುವ ಮಕ್ಕಳಿಗೆ

ಗವಸಾಗರದ ಗ್ರೇಯನ್ನು ನೀರಿನಲ್ಲಿ ಕಲಸಿ ದಿನಕ್ಕೆ 3 ಬಾರಿಯಂತೆ 7 ದಿನ ಕುಡಿಸಿದರೆ ಮಕ್ಕಳಲ್ಲಿ ಮಣ್ಣು ತಿನ್ನುವ ಕಾಯಿಲೆ ವಾಸಿಯಾಗುವುದಂತೆ. ಆದರೆ ಆ 7 ದಿನ, ಮಗು ಮಣ್ಣು ತಿನ್ನದಂತೆ ಎಚ್ಚರ ವಹಿಸಬೇಕು.

ಹಿಮ್ಮಡಿ ಒಡೆತಕ್ಕೆ

ಕೇದಗಿ (*Pandanus tectorius*, Soland) ಎಲೆಗಳನ್ನು ನೆರಳಿನಲ್ಲಿ ಒಣಗಿಸಿ ನಂತರ ಅದರಿಂದ ಭಸ್ಮವನ್ನು ತಯಾರಿಸಬೇಕು. ಈ ಭಸ್ಮವನ್ನು ರಾತ್ರಿ ಮಲಗುವಾಗ ಬೆಣ್ಣೆಯೊಂದಿಗೆ ಕಲಸಿ (ಭಸ್ಮ ಒಂದು ಪಟ್ಟಾದರೆ ಬೆಣ್ಣೆ ಎರಡು ಪಟ್ಟು) ಹಚ್ಚಬೇಕು. ಬೆಳಗ್ಗೆ ಎದ್ದು ಬಿಸಿ ನೀರಿನಲ್ಲಿ ಕಾಲನ್ನು ಸ್ವಚ್ಛ ಮಾಡಬೇಕು. ಸುಮಾರು ಒಂದು ವಾರದಿಂದ ಎರಡು ವಾರದವರೆಗೆ ಅನುಸರಿಸಬೇಕು ಹಾಗೂ ಈ ಸಮಯದಲ್ಲಿ ಉಷ್ಣದ ಪದಾರ್ಥವನ್ನು ಸೇವಿಸಬಾರದು.

ಮುಖದ ಮೇಲಿನ ಬಂಗಿಗೆ

50ಗ್ರಾಂ. ಬಿಳಿ ಸಾಸಿವೆ ಮತ್ತು 50 ಗ್ರಾಂ. ಕರಿ ಎಳ್ಳನ್ನು ಪುಡಿ ಮಾಡಿಕೊಳ್ಳಬೇಕು. ಈ ಪುಡಿಯನ್ನು ಆಡಿನ ಹಾಲು ಅಥವಾ ಮೂತ್ರದಲ್ಲಿ ಬೆರೆಸಿ ಮುಖಕ್ಕೆ ಹಚ್ಚಿಕೊಳ್ಳಬೇಕು. ಬೆಳಗ್ಗೆ ಸೀಗೆಕಾಯಿ ಪುಡಿಯಿಂದ ಮುಖ ತೊಳೆದುಕೊಳ್ಳಬೇಕು. ಈ ವಿಧಾನವನ್ನು 21 ದಿನ ಅನುಸರಿಸಬೇಕಂತೆ.

ಸಾಮಾನ್ಯ ಕಿವುಡುತನಕ್ಕೆ

ಒಂದು ಗ್ರಾಂ. ಸೈಂದವ ಲವಣವನ್ನು ಆಡಿನ ಮೂತ್ರದಲ್ಲಿ ಅರೆದು ರಾತ್ರಿ ಮಲಗುವಾಗ 3-4 ಹನಿಯನ್ನು ಕಿವಿಯಲ್ಲಿ ಹಾಕಬೇಕು. ಹೀಗೆ 21 ದಿನ ಮಾಡಬೇಕಂತೆ.

ಬಾಲಗ್ರಹ (ಮುಡು ದೋಷ) (Rickets)

ಪ್ರತಿ ದಿನ ಮಗುವಿನ ಸ್ನಾನವಾದ ನಂತರ ಲೋಬಾನದ ಹೊಗೆ ಹಾಕಿ ನಂತರ ಕೆಂಡದ ಮೇಲೆ ಸೂರ್ಯಕಾಂತಿಯ ಎಲೆಗಳನ್ನು ಹಾಕಿ ಅದರ ಹೊಗೆಯನ್ನು ಮಗುವಿಗೆ ಸ್ವಲ್ಪ ಸಮಯದ ಅಂತರ ಕೊಟ್ಟು, ಹಿಡಿಯಬೇಕು. ಮಗುವಿನ ವಯಸ್ಸಿಗೆ ಅನುಗುಣವಾಗಿ 5 ರಿಂದ 10 ಎಲೆಗಳನ್ನು ಉಪಯೋಗಿಸಬಹುದು. ಇದನ್ನು ಪ್ರತಿ ದಿನ 2 - 3 ವಾರದವರೆಗೆ ಅನುಸರಿಸಬೇಕು.

ಗರ್ಭಿಣಿಯರಲ್ಲಿ ಮಗು ಅಡ್ಡ ತಿರುಗಿದ್ದರೆ

100 ಗ್ರಾಂ. ನೀರಲ ಬೇರು ಮತ್ತು 100 ಗ್ರಾಂ. ಅಂಬಿ (*P. ambica*) ಯನ್ನು ನೀರಿನಲ್ಲಿ ಅರೆದು ಗರ್ಭಿಣಿಯ ಮೈಗೆ ಮತ್ತು ಹೊಟ್ಟೆಗೆ ಹಚ್ಚಬೇಕು. ಇದಾದ 1/2 ಗಂಟೆಯಲ್ಲಿ ಮಗು ನೇರವಾಗಿ ಸುಲಭ ಪ್ರಸವವಾಗುವುದು.

ಪಿತ್ತ ನಿವಾರಣೆ

ಅಳಲೆ ಕಾಯಿ (*Terminalia chebula*), ಹಿಪ್ಪಲಿ (*Pinus longum L*) ಮತ್ತು ಸಕ್ಕರೆಯನ್ನು ಸಮ ಪ್ರಮಾಣದಲ್ಲಿ ಬೆರೆಸಿ ಪುಡಿ ಮಾಡ ಬೇಕು. ಈ ಪುಡಿಯನ್ನು ಒಂದು ಲೋಟ ಶುಂಠಿ ಕಷಾಯದಲ್ಲಿ ಮಿಶ್ರ ಮಾಡಿ ನಂತರ ಇದಕ್ಕೆ ಒಂದು ಚಮಚ ಸೋಸಿದ ಗೋಮೂತ್ರವನ್ನು ಬೆರೆಸಿ ಕುಡಿಯಲು ಕೊಡಬೇಕು. ಇದನ್ನು ಪ್ರಾತ: ಕಾಲದಲ್ಲಿ ಹಾಗು ರಾತ್ರಿ ಮಲಗುವಾಗ ದಿನಕ್ಕೆರಡು ಬಾರಿಯಂತೆ 3 ದಿನ ಸೇವಿಸಬೇಕು ಹಾಗೂ ಈ ಸಮಯದಲ್ಲಿ ಹುಳಿ ಪದಾರ್ಥಗಳನ್ನು ಸೇವಿಸಬಾರದು.

ವಾಕರಿಕೆ

ಒಂದು ಸಣ್ಣ ಚೂರು ಇಂಗು, ಶುಂಠಿ ಮತ್ತು ಏಲಕ್ಕಿಯನ್ನು ಬಿಸಿ ನೀರಿನಲ್ಲಿ ಅರೆದು ಕಷಾಯ ತಯಾರಿಸಿ ದಿನಕ್ಕೆ ಮೂರು ಬಾರಿಯಂತೆ ಒಂದು ದಿನ ಸೇವಿಸಿದರೆ ವಾಕರಿಕೆ ಬರುವಂತಾಗುವುದು ನಿಲ್ಲುತ್ತದೆಯಂತೆ.

ಚೇಳು ಕಡಿದರೆ

ಉತ್ತರಾಣಿ (*Achyranthes aspera*) ಬೇರು, ಕಿರುಕಸಾಲಿ ಬೇರು ಮತ್ತು ಬಿಳಿಗಣಜಲಿ ಬೇರುಗಳನ್ನು ಸಮ ಪ್ರಮಾಣದಲ್ಲಿ ತೆಗೆದುಕೊಂಡು ಜಜ್ಜಿ ಚೂರ್ಣ ಮಾಡಿ ಸುಮಾರು 200 ಗ್ರಾಂನಷ್ಟು ಮಿಶ್ರಣವನ್ನು ಸಿದ್ಧಮಾಡಿಕೊಂಡು ಇದಕ್ಕೆ 50 ಹನಿ ಎಕ್ಕದ ಹಾಲ (*Calotrophis* milk) ನ್ನು ಹಾಕಿ ನೀರಿನಲ್ಲಿ ಅರೆದು ಸಣ್ಣ ಸಣ್ಣ ಗುಳಿಗೆಗಳನ್ನಾಗಿ ಮಾಡಿ ಒಣಗಿಸಿ ಇಟ್ಟಿರಬೇಕು. ಚೇಳು ಕಡಿದಾಗ ಈ ಗುಳಿಗೆಗಳನ್ನು ಅದರ ಮೇಲಿಟ್ಟು ಕಟ್ಟಬೇಕು.

ಹಲ್ಲು ನೋವಿಗೆ

ಕಿರುಕಸಾಲಿಯ ಮೂರು ಬೇರುಗಳನ್ನು ತೆಗೆದುಕೊಂಡು ಸ್ವಚ್ಛವಾಗಿ ತೊಳೆದು ಸ್ವಲ್ಪ ನೀರು ಹಾಕಿ ಜಜ್ಜಿ ರಸ ತೆಗೆದು ಬಟ್ಟೆಯಲ್ಲಿ ಸೋಸಿ ನಂತರ ಈ ರಸವನ್ನು ಹಲ್ಲು ನೋವಿರುವ ವಿರುದ್ಧ ದಿಕ್ಕಿನ ಕಿವಿಗೆ 4-5 ತೊಟ್ಟನ್ನು ಹಾಕಿದರೆ ಹಲ್ಲು ನೋವು ವಾಸಿಯಾಗುವುದಂತೆ. •

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ನಾಲ್ಕನೇ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ (Department of Science and Technology) ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು (Intellectual Property Rights) ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪು–ರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 5,000ದ ಐನೂರು ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದವರಿಗೂ ಅಷ್ಟೇ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿ ಪುಸ್ತಕದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿ ತರುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ, ಫೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ನಾಲ್ಕನೆಯ ಸ್ಪರ್ಧೆಗೆ ಡಿಸೆಂಬರ್ 2004 ರವರೆಗೆ ಅವಕಾಶವಿದೆ.

ಪೂರ್ವ ಸೂಚಿತ ಸಮ್ಮತಿ

ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಮುಂದೆ ಬಳಸಿಕೊಳ್ಳುವ ವಿಧಾನವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹಾ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು "ಪೂರ್ವ ಸೂಚಿತ ಸಮ್ಮತಿ" (Prior Informed Concent) ಪಡೆದ ನಂತರವೇ ಮುಂದುವರೆಯಲಾಗುವುದು.

ಪ್ರವೇಶ ಪತ್ರ, ಕಳುಹಿಸಬೇಕಾದ ವಿಳಾಸ:

ಡಾ॥ ಟಿ.ಎನ್. ಪ್ರಕಾಶ್ ಕಮ್ಮರಡಿ, *ಸಹ ಪ್ರಾಧ್ಯಾಪಕ ಮತ್ತು ಸಂಪಾದಕ 'ಹಿತ್ತಲಗಿಡ', ಅರ್ಥಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾಲಯ,*
ಜಿ.ಕೆ.ವಿ.ಕೆ., ಬೆಂಗಳೂರು – 560 065 ದೂರವಾಣಿ: 362 0025, email: prakashtnk@yahoo.com

(ಎಂತಹ ಶೋಧನೆಗಳನ್ನು ಕಳುಹಿಸಬಹುದು ಎನ್ನುವ ಉದಾಹರಣಾ ಮಾಹಿತಿಗಾಗಿ ಹಳೆಯ 'ಹಿತ್ತಲಗಿಡ' ಪುಸ್ತಕಗಳನ್ನು ನೋಡಬಹುದು)

ರಾಷ್ಟ್ರೀಯ ಸ್ಪರ್ಧೆಯ ಸಂಚಾಲಕರು:

National Co-ordinator, National Innovation Foundation, Satellite complex, Bangalow No.1,
Premchand Nagar Road, Ahmedabad - 380 015, Gujarat, e-main: campaign@nifindia. org

ಪತ್ರಿಕೆ ನೋಂದಣಿ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/-	ರೂ.400/-
ರೈತರು	ರೂ.60/-	ರೂ.500/-
ಇತರರು	ರೂ.75/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ "ಸಂಪಾದಕರು, ಹಿತ್ತಲಗಿಡ, ಬೆಂಗಳೂರು" ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ತೆರೆದ ಅಂಚೆ

ಗೆ, ...

....

....

....

ವಿಳಾಸ

ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065

Ph: 080-3620025 (O)
email: hittalu@bgl.vsnl.net.in

Printed by Sri. S. Sridhar, Published by Smt. K. Meenakshi (Owner). Printed at "Navabharath Enterprises" No.10, Sirur Park 'B' Street, Sheshadripuram, Bangalore - 560 020 and Published at No.399, 14-B Cross, New Town Yelahanka, Bangalore - 560 064. Edited by Dr. T.N. Prakash Kammaradi